ಸಂಪುಟ : 13 Volume | ಸಂಚಿಕೆ : 201 Issue | ಪುಟಗಳು : 08 Pages | ಮಂಗಳವಾರ 23 ಸೆಪ್ಟೆಂಬರ್ 2025 | ₹2 | RNINO:KARKAN/2011/48371 | BDR/054/2026-20274 | www.mallammanudi.in | mallammanudi@gmail.com | 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper

ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ

**ಬೆಳಗು**

ಜಗತ್ತಿನಲ್ಲಿ ಮೂರುವಸ್ತುಗಳನ್ನು ಮಡಚಿಡಲಾಗದು ಅವೆಂದರೆ ಸೂರ್ಯ , ಚಂದ್ರ ಮತ್ತು ಸತ್ಯ "

- ಗೌತಮ ಬುದ್ಧ

ಗುಂಡುಗುರ್ತಿಗೆ ಜಿಲ್ಲಾಧಿಕಾರಿ ಭೇಟಿ 2

ಜಿಎಸ್‌ಟಿ ಉಳಿತಾಯ ಸಂಭ್ರಮಾಚರಣೆ 4

ಚುಳಕಿ ನಾಲಾ ಅಭಿವೃದ್ಧಿಗೆ 175 ಕೋಟಿ ರೂ. 8

## ಮನೆ ಗೋಡೆ ಕುಸಿದು ಬಾಲಕಿ ಸಾವು : ನಾಲ್ಕು ಮಕ್ಕಳಿಗೆ ಗಾಯ



ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:ಸೆ.22: ಸತತ ಮಳೆಗೆ ಗೋಡೆ ಕುಸಿದು ಬಾಲಕಿ ಸಾವನಪ್ಪಿ ನಾಲ್ವರು ಮಕ್ಕಳಿಗೆ ಗಂಭೀರ ಗಾಯವಾಗಿರುವ ಘಟನೆ ಕಲಬುರಗಿ ಜಿಲ್ಲೆಯ ಯಡ್ರಾಮಿ ಪಟ್ಟಣದಲ್ಲಿ ನಡೆದಿದೆ. ರಾತ್ರಿ 2:30ರ ಸುಮಾರಿಗೆ ಘಟನೆ ನಡೆದಿದ್ದು, 17 ವರ್ಷದ ಸಾನಿಯಾ ಸೈಫನಸಾಬ್ ಸ್ಥಳದಲ್ಲೆ ಮೃತಪಟ್ಟಿದ್ದಾಳೆ. ಘಟನೆಯಲ್ಲಿ ಮೆಹಬೂಬ್, ನಿಶಾದ್, ಆಯಿಷಾ, ರಮಜಾನಬಿಗೆ ಗಾಯವಾಗಿದ್ದು, ಗಾಯಗಳುಗಳನ್ನು ಯಡ್ರಾಮಿ ಸ್ಥಳೀಯ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಲಾಗುತ್ತಿದೆ. ತಂದೆ-ತಾಯಿ ಕೂಲಿ ಕೆಲಸದ ನಿಮಿತ್ಯ ಬೇರೆ ಊರಿಗೆ ಹೋದ್ದ ವೇಳೆ ಈ ದುರ್ಘಟನೆ ನಡೆದಿದೆ. ಗೋಡೆ ಕುಸಿತದ ವಿಷಯ ತಿಳಿಯುತ್ತಿದ್ದಂತೆ ಸ್ಥಳೀಯರು ಮೂವರು ಮಕ್ಕಳ ರಕ್ಷಣೆ ಮಾಡಿದ್ದಾರೆ. ಈ ಕುರಿತು ಯಡ್ರಾಮಿ ಪೋಲಿಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಘಟನೆಯ ಬಳಿಕ ಯಾವ ಅಧಿಕಾರಿಗಳು ಸ್ಥಳಕ್ಕೆ ಬಾರದ ಹಿನ್ನೆಲೆ ಆಸ್ಪತ್ರೆಯ ಮುಂದೆ ಅಧಿಕಾರಿಗಳ ವಿರುದ್ಧ ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

## ಜಾತಿ ಗಣತಿಯಲ್ಲಿ ಹಿಂದೂ ರೆಡ್ಡಿ ಎಂದು ಬರೆಸಲು ಶಂಕರರೆಡ್ಡಿ ಚಿಟ್ಟಾ ಕರೆ

ಮಲ್ಲಮ್ಮ ನುಡಿ ವಾರ್ತೆ ಬೀದರ್:ಸೆ.22: ರಾಜ್ಯ ಸರ್ಕಾರ ಇಂದಿನಿಂದ ಜಾತಿಗಣತಿ ಆರಂಭಿಸಿದೆ. ಜಿಲ್ಲೆಯ ಹಾಗೂ ನಾಡಿನ ಸಮಸ್ತ ರೆಡ್ಡಿ ಕುಲಬಾಂಧವರು



ಸಮಿಕ್ಷೆಯಲ್ಲಿ ಧರ್ಮದ ಕಾಲಂನಲ್ಲಿ ಹಿಂದು, ಜಾತಿ ಕಾಲಂನಲ್ಲಿ ರೆಡ್ಡಿ, ಉಪಜಾತಿ ಕಾಲಂನಲ್ಲಿ, ರೆಡ್ಡಿ, ಜಾತಿಯ ಪರ್ಯಾಯ ಹೆಸರು ರೆಡ್ಡಿ ಎಂದೇ ಬರೆಸಬೇಕು ಕ್ರಮ ಸಂಖ್ಯೆ ಎ-1222 ಎಂದು ನಮೂದಿಸಬೇಕು ಎಂದು ಬೀದರ್ ರೆಡ್ಡಿ ಸಮಾಜದ ಜಿಲ್ಲಾಧ್ಯಕ್ಷ ಶಂಕರ ರೆಡ್ಡಿ ಚಿಟ್ಟಾ ರವರು ಪತ್ರಿಕಾ ಪ್ರಕಟಣೆಯ ಮೂಲಕ ಸಮಾಜದ ಬಾಂಧವರಲ್ಲಿ ಮನವಿ ಮಾಡಿದ್ದಾರೆ.

## ಹಡಪದ ಪರಿವಾರದಲ್ಲಿ ಘಟಸ್ಥಾಪನೆ

ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ:ಸೆ.22: ಪಟ್ಟಣದ ಹಡಪದ ಪರಿವಾರದ ಮನೆಯಲ್ಲಿ ಘಟಸ್ಥಾಪನೆ (ಕಲಶ ಸ್ಥಾಪನೆ) ಎಂದರೆ ನವರಾತ್ರಿ ಹಬ್ಬದ ಆರಂಭದಲ್ಲಿ ದುರ್ಗಾ ದೇವಿಗೆ ವಿನಂತಿ ಮಾಡಿ, ಮನೆಯ ಪ್ರಾರ್ಥನಾ ಕೋಣೆಯಲ್ಲಿ ಪವಿತ್ರ ಕಲಶವನ್ನು ಸ್ಥಾಪಿಸಲಾಯಿತು. ಈ ಆಚರಣೆಯಿಂದ ಮನೆಗೆ ಸಂಪತ್ತು, ಸಮೃದ್ಧಿ, ಅದೃಷ್ಟ ಮತ್ತು ಆಶೀರ್ವಾದಗಳು ಬರುತ್ತವೆ



ಎನ್ನಲಾಗುತ್ತದೆ. ಶುಭಮುಹೂರ್ತದಲ್ಲಿ ಈ ಕಲಶವನ್ನು ಇರಿಸಿ, 9 ದಿನಗಳ ಕಾಲ ನಿತ್ಯ ಬೆಳಿಗ್ಗೆ ಮತ್ತು ಸಾಯಂಕಾಲ ಪೂಜೆ ಸಲ್ಲಿಸುತ್ತಾರೆ. ಮಾತೋಶ್ರೀ ನಾಗಮ್ಮ ಹಡಪದ, ರಾಜಕುಮಾರ ಆರ್.ಹಡಪದ, ಆದಿತ್ಯ ಎ.ಹಡಪದ, ಆಯುಷ್ ಎ.ಹಡಪದ, ಅಮೀತ ಡಿ.ಹಡಪದ ಸೇರಿದಂತೆ ಕುಟುಂಬ ಸದಸ್ಯರು ದೇವಿಯ ದರ್ಶನ ಪಡೆದರು.

## ನವರಾತ್ರಿ ಮೊದಲ ದಿನ ತ್ರಿಪುರ ಸುಂದರಿ ದೇವಿ ದರ್ಶನ ಪಡೆದ ಮೋದಿ



ಮಲ್ಲಮ್ಮ ನುಡಿ ವಾರ್ತೆ ಅಗರ್ತಲಾ:ಸೆ.22: ನವರಾತ್ರಿ ಉತ್ಸವದ ಮೊದಲ ದಿನವಾದ ಇಂದು ಪ್ರಧಾನಿ ನರೇಂದ್ರ ಮೋದಿ ಅವರು ಗಡಿ ರಾಜ್ಯದ ಮಾತಾ ತ್ರಿಪುರಸುಂದರಿ' ಅಮ್ಮನವರ ದೇವಾಲಯಕ್ಕೆ ಭೇಟಿ ನೀಡಿ ಪ್ರಾರ್ಥನೆ ಸಲ್ಲಿಸಿದರು. ತ್ರಿಪುರಾದ ಉದಯ್‌ಪುರದಲ್ಲಿರುವ ದೇಗುಲಕ್ಕೆ ವಿಶೇಷ ಪೂಜೆ ಸಲ್ಲಿಸಿದರು. ನಂತರ ಗೋಮತಿ ಜಿಲ್ಲೆಯ ಉದಯಪುರ ಪಟ್ಟಣದಲ್ಲಿ ಜೀರ್ಣೋದ್ಧಾರಗೊಂಡಿರುವ ತ್ರಿಪುರೇಶ್ವರಿ ದೇಗುಲದ ಉದ್ಘಾಟನೆ ನೆರವೇರಿಸಿದರು. ದೇಶದಲ್ಲಿರುವ 51 ಶಕ್ತಿಪೀಠಗಳಲ್ಲಿ ತ್ರಿಪುರೇಶ್ವರಿ ದೇಗುಲವೂ ಒಂದು. ಮಹಾರಾಜ ಧನ್ಯ ಮಾಣಿಕ್ಯ 1,501ರಲ್ಲಿ ಈ ದೇಗುಲ ನಿರ್ಮಿಸಿದ್ದರು. ತೀರ್ಥಕ್ಷೇತ್ರ ಪುನರುಜ್ಜೀವನ ಮತ್ತು ಅಧ್ಯಾತ್ಮ ವಿಸ್ತರಣಾ ಅಭಿಯಾನ ಅಡಿಯಲ್ಲಿ 52 ಕೋಟಿ ರೂ. ವೆಚ್ಚದಲ್ಲಿ ಈ ದೇಗುಲ ಜೀರ್ಣೋದ್ಧಾರಗೊಂಡಿದ್ದು, ಪ್ರಧಾನಿ ಮೋದಿ ಉದ್ಘಾಟಿಸಿದ್ದಾರೆ. ಸುಮಾರು 45 ನಿಮಿಷಗಳ ಕಾಲ ನಡೆದ ಉದ್ಘಾಟನಾ ಕಾರ್ಯಕ್ರಮದಲ್ಲಿ ತ್ರಿಪುರಾದ ಮುಖ್ಯಮಂತ್ರಿ ಮಾಣಿಕ್ ಸಾಹಾ ಹಾಗೂ ಸಂಪುಟದ ಸಚಿವರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ದೇಶದ ಶಕ್ತಿಪೀಠಗಳಲ್ಲಿ ಒಂದಾದ ಈ ದೇವಾಲಯದ ಆವರಣದಲ್ಲಿ ಅನೇಕ ಮಾರ್ಪಾಡುಗಳನ್ನು ತರಲಾಗಿದೆ. ಪ್ರವೇಶದ್ವಾರಗಳನ್ನು ನವೀಕರಿಸಲಾಗಿದೆ. ಧ್ಯಾನಮಂಡಪ, ಅತಿಥಿಗೃಹ, ಕಚೇರಿ ಕೊಠಡಿಗಳನ್ನು ಆಧುನಿಕ ರೂಪದಲ್ಲಿ ನಿರ್ಮಿಸಲಾಗಿದೆ. ಇದರಿಂದ ಪ್ರವಾಸೋದ್ಯಮಕ್ಕೂ ಉತ್ತೇಜನ ಸಿಗಲಿದೆ. ವ್ಯಾಪಾರ, ಉದ್ಯೋಗಾವಕಶಗಳು ಸೃಜಿಸಲಿವೆ ಎಂದು ಆಡಳಿತ ಮಂಡಳಿ ಹರ್ಷ ವ್ಯಕ್ತಪಡಿಸಿದೆ. ಇದಕ್ಕೂ ಮುನ್ನ ಅರುಣಾಚಲ ಪ್ರದೇಶದ ಇಟಾನಗರದಲ್ಲಿ 5,100 ಕೋಟಿ ರೂ.ಗಳಿಗೂ ಅಧಿಕ ಮೌಲ್ಯದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆ ಮತ್ತು ಉದ್ಘಾಟನೆ ನೆರವೇರಿಸಿದರು.

# ನಾಡಹಬ್ಬ ದಸರಾ

# ಎಲ್ಲರನ್ನೂ ಒಗ್ಗೂಡಿಸುವ ಸಮನ್ವಯದ ಮೇಳ: ಸಾಹಿತಿ ಬಾನು ಮುಷ್ತಾಕ್

ಮಲ್ಲಮ್ಮ ನುಡಿ ವಾರ್ತೆ ಮೈಸೂರು:ಸೆ.22: ಮೈಸೂರು ದಸರಾ, ನಾಡಿನ ನಾಡಿ, ಸಂಸ್ಕೃತಿಯ ಉತ್ಸವ, ಎಲ್ಲರನ್ನೂ ಒಗ್ಗೂಡಿಸುವ ಸಮನ್ವಯದ ಮೇಳವಾಗಿದೆ ಎಂದು ಸಾಹಿತಿ ಹಾಗೂ 2025ರ ಅಂತರಾಷ್ಟ್ರೀಯ ಬೂಕರ್ ಬಹುಮಾನ ವಿಜೇತರಾದ ಶ್ರೀಮತಿ ಬಾನು ಮುಷ್ತಾಕ್ ಅವರು ತಿಳಿಸಿದರು. ಅವರು ಇಂದು ನಾಡದೇವತೆ ಶ್ರೀ ಚಾಮುಂಡೇಶ್ವರಿ ದೇವಿಯ ಅಗ್ರಪೂಜೆಯೊಂದಿಗೆ ಪ್ರಾರಂಭವಾದ ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವವನ್ನು ಉದ್ಘಾಟಿಸಿ ಮಾತನಾಡಿದರು. ಮೈಸೂರು ದಸರಾದ ಪವಿತ್ರದ ಕ್ಷಣದಲ್ಲಿ ಚಾಮುಂಡಿ ತಾಯಯ ಕೃಪೆಯ ನೆರಳಿನಲ್ಲಿ, ಈ ವೇದಿಕೆಯಿಂದ ನಿಮ್ಮೆದುರು ನಿಲ್ಲುವ ಅವಕಾಶ ದೊರೆತಿರುವುದು ನನ್ನ ಜೀವನದ ಅತ್ಯಂತ ಗೌರವದ ಘಳಿಕೆ. ದಸರಾ ಎಂದರೆ ಕೇವಲ ಹಬ್ಬವಲ್ಲ, ಇದು ನಾಡಿನ ನಾಡಿ, ಸಂಸ್ಕೃತಿಯ ಉತ್ಸವ, ಎಲ್ಲರನ್ನೂ ಒಗ್ಗೂಡಿಸುವ ಸಮನ್ವಯದ ಮೇಳ. ಈ ನೆಲದಲ್ಲಿ ಹುಟ್ಟಿದ ಪ್ರತಿಯೊಂದು ಜೀವಕ್ಕೂ ಈ ಮಣ್ಣಿನ ಬಾರಿಸುದಾರಿಕೆ, ಸ್ಪಂದನೆ ಮತ್ತು ನೆನಪುಗಳಿವೆ ಎಂದರು. ಮೈಸೂರು ಅರಸರ ಸಂಸ್ಕೃತಿಯ ಪರಂಪರೆಯಿಂದ ಹಿಡಿದು, ಕನ್ನಡ ಭಾಷೆಯ ಅಂತರಾಳದ ಹೃದಯಸ್ಪಂದನದವರೆಗೆ ಈ ಹಬ್ಬವು ನಮಗೆ ಸ್ಮರಿಸುತ್ತದೆ. ಸಂಸ್ಕೃತಿ ಎಂದರೆ ಬೇರೆ ಬೇರೆ ಧ್ವನಿಗಳ ಸಂಗಮ. ವಿಭಿನ್ನತೆಯಲ್ಲೇ ಏಕತೆಯ ಸುಗಂಧ. ಮಹಾರಾಜರು ಜಯಚಾಮರಾಜೇಂದ್ರ ಒಡೆಯರು ಮುಸ್ಲಿಂರ ನಂಬಿ, ಅವರನ್ನು ಅನುಮಾನಿಸದೇ, ಅಂಗರಕ್ಷಕರ ಪಡೆಯ ಸದಸ್ಯರಾಗಿದ್ದರು, ಇದು ನಮಗೆ ಬಹಳ ಹೆಮ್ಮೆಯ ಮತ್ತು ಅಪ್ಯಾಯಮಾನವಾದ ವಿಷಯ. ಸಂಸ್ಕೃತಿ ಎಂದರೆ ಹೃದಯದಗಲವನ್ನು ಹುಟ್ಟಿಸುವ ನನ್ನ ಧಾರ್ಮಿಕ ನಂಬಿಕೆ, ಯಾವಗಾಗಲೂ ಜೀವ ಪರ ಮಾನವೀಯಪರ. ಈ ನೆಲದ ಸಂಸ್ಕೃತಿಯ ಮೂಲ-ಎಲ್ಲರನ್ನೊಳಗೊಳ್ಳುವ ಎಲ್ಲರ ಬದುಕನ್ನು ಗೌರವಿಸುವ, ನಮ್ಮೆಲ್ಲರ ಸರ್ವ ಜನಾಂಗದ ಶಾಂತಿಯ ತೋಟ ಎಂದರು. ಮೈಸೂರು ದಸರಾ ಘೋಷಣೆಯ ನಮ್ಮೆಲ್ಲರ ಕಿವಿಯಲ್ಲಿ ಪ್ರತಿಧ್ವನಿಸಲಿ. ಇದು ಶಾಂತಿಯ ಹಬ್ಬ, ಸೌಹಾರ್ದದ ಮೇಳ, ಇದು ಸರ್ವಜನಾಂಗದ ಶಾಂತಿಯ ತೋಟ. ನಾವು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಗೌರವಿಸಿ, ಪರಸ್ಪರರ ನಂಬಿಕೆಗಳನ್ನು, ಸಂಸ್ಕೃತಿಗಳನ್ನು ಗೌರವಿಸುವುದರ ಮೂಲಕ ನಮ್ಮ ಬದುಕನ್ನು ಶ್ರೀಮಂತಗೊಳಿಸಬೇಕಿದೆ. ಈ ನೆಲದ ಸುಗಂಧವನ್ನು ಐಕ್ಯತೆಯಾಗಲಿ, ನೆಲದ ಬಿಸಿಲು ಕೂಡ ಸಾಹಾರ್ದತೆಯಿಂದ ಕೂಡಿದೆ. ಈ ನೆಲದ ಬಿಸಿಲು ಕೂಡ ಮಾನವೀಯ ಪ್ರೀತಿಯ ಪ್ರತೀಕವಾಗಿದೆ. ಈ ಸಂದರ್ಭದಲ್ಲಿ ಚಾಮುಂಡಿ ತಾಯಿಯ ಮಹಿಮೆ ನಮ್ಮೆಲ್ಲರ ಜೀವನಕ್ಕೆ ಮಾರ್ಗದರ್ಶಕವಾಗಿರಲಿ. ತಾಯಿ ಚಾಮುಂಡಿಯ ಸತ್ಯ, ಧೈರ್ಯ ಹಾಗೂ ರಕ್ಷಕತ್ವದ ಸಂಕೇತ. ನಮ್ಮೊಳಗಿನ ದ್ವೇಷ, ಅಸಹಿಷ್ಣುತೆಗಳನ್ನು ನಾಶವಾಗಲೆಂದು ಬಯಸುತ್ತೇನೆ. ಈ ದಸರಾ ಹಬ್ಬ ಕೇವಲ ಮೈಸೂರು ನಗರಕ್ಕೆ ಸೀಮಿತವಾಗದೇ, ನಮ್ಮ ನಾಡಿಗೆ ಮಾತ್ರ, ದೇಶಕ್ಕೆ ಮಾತ್ರ ಸೀಮಿತವಾಗದೇ, ಇಡೀ ಜಗತ್ತಿನಾದ್ಯಂತ ಮಾನವಕುಲಕ್ಕೆ ಶಾಂತಿ ಸಹಾನುಭೂತಿ, ಪ್ರೀತಿ ಮತ್ತು ನ್ಯಾಯದ ದೀಪವನ್ನು ಬೆಳಗಿಸಲೆಂದು ಹಾರೈಸುತ್ತೇನೆ. ಇಂದು ಬೆಳಗಿಸಿದ ದೀಪ ಈ ಸಂದೇಶದೊಂದಿಗೆ ಇಡೀ ಪ್ರಪಂಚದಾದ್ಯಂತ ತನ್ನ ನೆಲೆಯನ್ನು ಕಂಡುಕೊಳ್ಳಲಿ ಎಂದು ಆಶಿಸುತ್ತೇನೆ ಎಂದರು. ನನ್ನ ಬದುಕು ನನಗೆ ಅನೇಕ ಪಾಠಗಳನ್ನು ಕಲಿಸಿದೆ.



## ನಾಡ ಹಬ್ಬ ದಸರಾ ವಿಚಾರದಲ್ಲಿ ಕೆಟ್ಟ ರಾಜಕಾರಣ ಬೇಡ:ಸಿಎಂ.



ಮಲ್ಲಮ್ಮ ನುಡಿ ವಾರ್ತೆ ಮೈಸೂರು: ಸೆ. 22:ಗೋಡಾ ಹೈ-ಮೈದಾನ್ ಹೈ: ಬನ್ನಿ ಚುನಾವಣೆಯಲ್ಲಿ ರಾಜಕಾರಣ ಮಾಡೋಣ. ನಾಡಹಬ್ಬದ ವಿಚಾರದಲ್ಲಿ ಕೆಟ್ಟ ರಾಜಕಾರಣ ಬೇಡ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸವಾಲು ಎಸೆದರು. ತಾಯಿ ಚಾಮುಂಡೇಶ್ವರಿಗೆ ಪೂಜೆ ಸಲ್ಲಿಸಿದ ಬಳಿಕ ನಾಡಹಬ್ಬ ಐತಿಹಾಸಿಕ ದಸರಾ ಉದ್ಘಾಟನೆ ಬಳಿಕ ವೇದಿಕೆ ಕಾರ್ಯಕ್ರಮದಲ್ಲಿ ಮಾತನಾಡಿದರು. ದಸರಾ ಮತ್ತು ನಮ್ಮ ಸಾಂಸ್ಕೃತಿಕ ಹಿರಿಮೆಯ ಪರಿಚಯ ಇಲ್ಲದವರು ಬಾನು ಮುಷ್ತಾಕ್ ಅವರಿಗೆ ವಿರೋಧಿಸಿದ್ದರು. ಇತಿಹಾಸ ತಿರುಚಿ, ಸ್ವಾರ್ಥ ರಾಜಕೀಯ ಮಾಡುವುದು ಅಕ್ಷಮ್ಯ ಅಪರಾಧ. ರಾಜಕಾರಣ ಮಾಡುವುದಿದ್ದರೆ ಚುನಾವಣೆಯಲ್ಲಿ ಮಾಡೋಣ. ನಾಡಹಬ್ಬದ ವಿಚಾರದಲ್ಲಿ ಕೆಳಮಟ್ಟದ ರಾಜಕಾರಣ ಮಾಡುವುದು ಕ್ಷುಲ್ಲಕ ಎಂದರು. ನಾಡಿನ ಬಹುಸಂಖ್ಯಾತ ಸಮುದಾಯ ಬಾನು ಮುಷ್ತಾಕ್ ಅವರಿಂದ ದಸರಾ ಉದ್ಘಾಟಿಸಿರುವುದನ್ನು ಸ್ವಾಗತಿಸಿದೆ. ಇದು ಹೆಮ್ಮೆಯ ಸಂಗತಿ. ಅಂತಾರಾಷ್ಟ್ರೀಯ ಬೂಕರ್ ಪ್ರಶಸ್ತಿ ಪುರಸ್ಕೃತರಾದ ಬಾನು ಮುಷ್ತಾಕ್ ಅವರು ದಸರಾ ಉದ್ಘಾಟಿಸಿರುವುದು ಸೂಕ್ತವಾಗಿದೆ. ಬಾನು ಮುಷ್ತಾಕ್ ಮುಸ್ಲಿಂ ಮಹಿಳೆ ಎನ್ನುವುದಕ್ಕಿಂತ ಮಾನವೀಯ ಮೌಲ್ಯ ಪಾಲಿಸುವ ಮನುಷ್ಯರು. ನಾವು ಮನುಷ್ಯರು ಪರಸ್ಪರ ಪ್ರೀತಿಯಿಂದ ಬಾಳಬೇಕು. ದ್ವೇಷ ಮನುಷ್ಯತ್ವದ ವಿರೋಧಿ. ಆದ್ದರಿಂದ ದ್ವೇಷವನ್ನು ಆಚರಿಸುವವರು ಮನುಷ್ಯತ್ವದ ವಿರೋಧಿಗಳು ಎಂದರು. ಸಂವಿಧಾನದ ಮೌಲ್ಯಗಳಾದ ಸಹಿಷ್ಣತೆ-ಸಹಬಾಳ್ವೆ ಪಾಲಿಸುವವರು ಮಾತ್ರ ಅಪ್ಪಟ ಭಾರತೀಯರು. ನಮ್ಮ ಸಂವಿಧಾನ ಜಾತ್ಯತೀತ ಮತ್ತು ಧರ್ಮಾತೀತ. ಇದನ್ನೇ ಹೈಕೋರ್ಟ್-ಸುಪ್ರೀಂಕೋರ್ಟ್ ಎತ್ತಿಹಿಡಿದಿದೆ. ಯಾರಿಗೆ ಭಾರತೀಯರು ಎನ್ನುವ ಹೆಮ್ಮೆ ಇರುತ್ತದೋ ಅವರಿಗೆ ಮಾತ್ರ ಸಂವಿಧಾನದ ಬಗ್ಗೆ ಹೆಮ್ಮೆ ಇರುತ್ತದೆ. ನಮಗೆ ನಮ್ಮ ಹಕ್ಕು ಮತ್ತು ಜವಾಬ್ದಾರಿಗಳು ಗೊತ್ತಾಗಬೇಕಾದರೆ ಸಂವಿಧಾನ ಗೊತ್ತಿರಬೇಕು ಎಂದರು. ರಾಷ್ಟ್ರಕವಿ ಕುವೆಂಪು ಅವರ ಮಾತನ್ನು ನಾವು ಮರೆಯಬಾರದು. ಗುಡಿ-ಚರ್ಚು-ಮಸೀದಿಗಳ ಬಿಟ್ಟು ಹೊರ ಬನ್ನಿ ಎಂದು ಕರೆ ನೀಡಿದ ಸಿಎಂ, ಕುವೆಂಪು ಅವರ ಆಶಯದ ಸರ್ವ ಜನಾಂಗದ ಶಾಂತಿಯ ತೋಟವನ್ನಾಗಿ ರಾಜ್ಯವನ್ನು ಗಟ್ಟಿಗೊಳಿಸಬೇಕು ಎಂದು ಕುವೆಂಪು ಅವರ ಮಾತನ್ನು ಉಲ್ಲೇಖಿಸಿದ ಮುಖ್ಯಮಂತ್ರಿಗಳು ಜಾತ್ಯತೀತತೆಯ ವಿರೋಧಿಗಳಿಗೆ ಚಾಟಿ ಬೀಸಿದರು. ಸಂವಿಧಾನದ ಆಶಯದಂತೆ ಎಲ್ಲಾ ಜಾತಿ, ಎಲ್ಲಾ ಧರ್ಮದ ಮತ್ತು ಎಲ್ಲಾ ಪಕ್ಷದ ಬಡವರಿಗೆ ನಾವು ಗ್ಯಾರಂಟಿ ಗಳನ್ನು ಜಾರಿ ಮಾಡಿದ್ದೇವೆ. ವಿರೋಧ ಪಕ್ಷದವರು ಗ್ಯಾರಂಟಿಗಳ ಫಲಾನುಭವಿಗಳಲ್ಲವೇ ಎಂದು ಸಿಎಂ ಪ್ರಶ್ನಿಸಿದರು. ಈ ಗ್ಯಾರಂಟಿಗಳು ನಿಲ್ಲುವುದಿಲ್ಲ. ನಮ್ಮ ಗ್ಯಾರಂಟಿಗಳಿಂದಾಗಿ ನಮ್ಮ ರಾಜ್ಯದ ನಮ್ಮ ಜನಗಳ ತಲಾ ಆದಾಯ ದೇಶದಲ್ಲೇ ನಂಬರ್ ಒನ್ ಆಗಿದೆ. ಈಗ ಜಿಡಿಪಿಯಲ್ಲಿ ದೇಶದಲ್ಲೇ ನಂಬರ್ ಒನ್ ಆಗಿದ್ದೇವೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಒಂದು ಕಡೆ ನಮ್ಮ ಗ್ಯಾರಂಟಿಗಳನ್ನು ವಿರೋಧಿಸುವ ವಿರೋಧ ಪಕ್ಷದವರು ಮತ್ತೊಂದು ಕಡೆ ನಮ್ಮ ಗ್ಯಾರಂಟಿಗಳನ್ನು ಕದ್ದಿದ್ದಾರೆ ಎಂದರು.

## ಕಟ್ಟ ಕಡೆಯ ವ್ಯಕ್ತಿಗೂ ಸಾಮಾಜಿಕ ನ್ಯಾಯ:ಸಚಿವ ಖಂಡ್ರೆ

ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ:ಸೆ.22: ರಾಜ್ಯದ ಕಟ್ಟ ಕಡೆಯ ವ್ಯಕ್ತಿಗೂ ಸಾಮಾಜಿಕ ನ್ಯಾಯ ಕಲ್ಪಿಸುವುದು ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಉದ್ದೇಶವಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಹೇಳಿದರು. ಪಟ್ಟಣದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಸೋಮವಾರ ಆಯೋಜಿಸಿದ್ದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ ಚಾಲನೆ ನೀಡಿ ಅವರು ಮಾತನಾಡಿದರು. ರಾಜ್ಯದಲ್ಲಿ ಸುಮಾರು 7 ಕೋಟಿ ಜನರು ವಾಸವಾಗಿದ್ದಾರೆ. ಅವರ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸ್ಥಿತಿಗತಿ ತಿಳಿದು ಕೊಳ್ಳಲು ಈ ಸಮೀಕ್ಷೆ ಅತ್ಯಂತ ಸಹಕಾರಿ ಆಗಲಿದೆ. ಸಮೀಕ್ಷೆಯಲ್ಲಿ ಪ್ರತಿಯೊಬ್ಬರನ್ನು 60 ಪ್ರಶ್ನೆಗಳನ್ನು ಕೇಳಲಾಗುತ್ತದೆ. ರಾಜ್ಯದಾದ್ಯಂತ ಸೆ.22 ರಿಂದ ಅ.7 ರವರೆಗೆ ಸಾಮಾಜಿಕ ಮತ್ತು ಶೈಕ್ಷಣಿಕ ನಡೆಯಲಿದ್ದು, ಸಮಗ್ರ ಸಮೀಕ್ಷೆ ವರದಿ ಆಧರಿಸಿ ಎಲ್ಲ ವರ್ಗದ ಜನರಿಗೂ



ನ್ಯಾಯಯುತವಾಗಿ ಸರಕಾದ ಸೌಲಭ್ಯ, ಯೋಜನೆಗಳನ್ನು ವಿಸ್ತರಿಸಲಾಗುವುದು. ಹಾಗಾಗಿ ಪ್ರತಿಯೊಬ್ಬರು ಭಾಗವಹಿಸಿ ಈ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಮಹತ್ವದ ಮಾಹಿತಿ ನೀಡಬೇಕು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಪುರಸಭೆ ಅಧ್ಯಕ್ಷೆ ಶಶಿಕಲಾ ಅಶೋಕ, ಉಪಾಧ್ಯಕ್ಷ ವಿಜಯಕುಮಾರ ರಾಜಭವನ, ಹಿಂದುಳಿದ ವರ್ಗಗಳ ಇಲಾಖೆ ಅಧಿಕಾರಿ ವಿಜಯಮಾಲಾ ವಗ್ಗೆ ಸೇರಿದಂತೆ ಹಲವರು ಭಾಗವಹಿಸಿದ್ದರು.

## ಸಂಸ್ಕೃತಿ-ಪರಂಪರೆ ಪರಿಪಾಲನೆಯಿಂದ ಜಗದಲ್ಲಿ ಶಾಂತಿ

ಮಲ್ಲಮ್ಮ ನುಡಿ ವಾರ್ತೆ ಬಸವಕಲ್ಯಾಣ:ಸೆ.22: ಭಾರತೀಯ ಸಂಸ್ಕೃತಿ ಉತ್ಕೃಷ್ಟವಾದುದು. ಆಧುನಿಕತೆಯ ಹೆಸರಿನಲ್ಲಿ ಸಂಸ್ಕೃತಿ ಸಭ್ಯತೆ ನಾಶಗೊಳ್ಳಬಾರದು. ಆದರ್ಶ ಸಂಸ್ಕೃತಿ ಮತ್ತು ಪರಂಪರೆ ಮೌಲ್ಯಾಚರಣೆಯಿಂದ ಜಗದಲ್ಲಿ ಶಾಂತಿ ನೆಲೆಗೊಳ್ಳಲು ಸಾಧ್ಯವಾಗುವುದೆಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು. ಅವರು ಸೋಮವಾರ ಶರನ್ನವರಾತ್ರಿ ದಸರಾ ಧರ್ಮ ಸಮ್ಮೇಳನದ ಉದ್ಘಾಟನಾ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಸಮಾರಂಭ ಉದ್ಘಾಟಿಸಿದ ರಾಜ್ಯ ಬಿಜೆಪಿ ಅಧ್ಯಕ್ಷ-ಶಾಸಕ ಬಿ.ವೈ.ವಿಜಯೇಂದ್ರ ಮಾತನಾಡಿ ಭಾರತೀಯ ಸಂಸ್ಕೃತಿಯಲ್ಲಿ ಹಬ್ಬಗಳಿಗೆ ಬಹಳಷ್ಟು ಮಹತ್ವದ ಸ್ಥಾನ ಕಲ್ಪಿಸಿದ್ದಾರೆ. ಹಬ್ಬಗಳು ಜನಮನದ ಮೇಲೆ ಅಗಾಧವಾದ ಪರಿಣಾಮವನ್ನು ಬೀರುತ್ತವೆ. ಶ್ರೀ ರಂಭಾಪುರಿ ಪೀಠದ ದಸರಾ ಮಹೋತ್ಸವ ಮೈಸೂರಿನ ದಸರಾ ಮಹೋತ್ಸವದಷ್ಟೇ ಪ್ರಖ್ಯಾತಿ ಪಡೆದಿದೆ. ಹತ್ತು ದಿನಗಳ ಕಾಲ ಜರುಗಲಿರುವ ದಸರಾ ಮಹೋತ್ಸವದಿಂದ ಮನುಷ್ಯ ಸನ್ಮಾರ್ಗದಲ್ಲಿ ನಡೆದು ಆದರ್ಶ ಸತ್ಪ್ರಜೆಯಾಗಬೇಕು. ಸ್ವಧರ್ಮ ನಿಷ್ಠೆ ಮತ್ತು ಪರಧರ್ಮ ಸಹಿಷ್ಣುತೆ ಬೆಳೆದು ಬರಬೇಕು. ನಾಡಿನ ರೈತರ ಬದುಕು ಹಸನಗೊಳ್ಳಬೇಕು. ಯುವ ಪೀಳಿಗೆಯ ಮೇಲೆ ಹೆಚ್ಚು ಜವಾಬ್ದರಿ ಇದ್ದು ಯುವಕರು ಸನ್ಮಾರ್ಗದಲ್ಲಿ ನಡೆಯುವಂತಾಗಲೆಂದರು. ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಬಸವಕಲ್ಯಾಣ ಶರನ್ನವರಾತ್ರಿ ದಸರಾ ಮಹೋತ್ಸವ ಸಮಿತಿಯ ಅಧ್ಯಕ್ಷರಾದ ಈಶ್ವರ ಖಂಡ್ರೆ, ಶ್ರೀ ರಂಭಾಪುರಿ ಜಗದ್ಗುರುಗಳ ಭಾವಚಿತ್ರ ಬಿಡುಗಡೆ ಮಾಡಿ ಮಾತನಾಡಿ ಭೂಮಿಯಲ್ಲಿ ಹಲವಾರು ಧರ್ಮಗಳು ಬೆಳೆದು ಬಂದಿವೆ. ಸಕಲರಿಗೂ ಒಳಿತನ್ನೇ ಬಯಸಿದ ವೀರಶೈವ ಲಿಂಗಾಯತ ಧರ್ಮ ಮಾನವೀಯ ಆದರ್ಶ ಮೌಲ್ಯಗಳನ್ನು ಪ್ರತಿಪಾದಿಸಿದೆ ಎಂದರು.



## ಜಾತಿ ಗಣತಿಗೆ ತಡೆ ಕೋರಿ ಅರ್ಜಿ; ವಿಚಾರಣೆ ಮುಂದೂಡಿದ ಹೈಕೋರ್ಟ್




ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು:ಸೆ.22: ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ನಡೆಸುತ್ತಿರುವ ಸಾಮಾಜಿಕ-ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆ(ಜಾತಿ ಗಣತಿ)ಗೆ ತಡೆ ಕೋರಿ ಸಲ್ಲಿಸಲಾಗಿದ್ದ ಅರ್ಜಿಗಳನ್ನು ಹೈಕೋರ್ಟ್ ಸೋಮವಾರ ವಿಚಾರಣೆ ನಡೆಸಿತು. ಇಂದು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಮತ್ತು ನ್ಯಾಯಮೂರ್ತಿ ಸಿ ಎಂ ಜೋಶಿ ಅವರ ವಿಭಾಗೀಯ ಪೀಠ, ಸಮೀಕ್ಷೆಯ ಕಾನೂನುಬದ್ಧತೆಯನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಗಳ ವಿಚಾರಣೆ ನಡೆಸಿತು. ನ್ಯಾಯಾಲಯವು ಆರಂಭದಲ್ಲಿ ದಸರಾ ರಜೆಯ ನಂತರ ಈ ವಿಷಯವನ್ನು ಕೈಗೆತ್ತಿಕೊಳ್ಳಬಹುದು ಎಂದು ಹೇಳಿತು. ಆದರೆ ಅರ್ಜಿದಾರರ ಪರ ವಕೀಲರು ಈ ವಿಷಯವು ತುರ್ತು ಇದೆ ಮತ್ತು ತಡೆ ನೀಡಬೇಕು ಎಂದು ಕೋರಿದರು. ಈ ಸಮೀಕ್ಷೆಯು ನಿವಾಸಿಗಳನ್ನು ಜಿಯೋ-ಟ್ಯಾಗಿಂಗ್ ಮಾಡುವುದು ಮತ್ತು ಅವರ ವಿವರಗಳನ್ನು ಆಧಾರ್‌ನೊಂದಿಗೆ ಲಿಂಕ್ ಮಾಡುವುದನ್ನು ಒಳಗೊಂಡಿರುತ್ತದೆ. ಇದು ಗೌಪ್ಯತೆ ಹಕ್ಕುಗಳನ್ನು ಉಲ್ಲಂಘಿಸುತ್ತದೆ ಮತ್ತು ಆಧಾರ್ ಕಾಯ್ದೆ, 2016 ಕ್ಕೆ ವಿರುದ್ಧವಾಗಿದೆ ಎಂದು ಅವರು ಹೇಳಿದರು. ಅರ್ಜಿದಾರರ ಪರ ಹಿರಿಯ ವಕೀಲ ಪ್ರಭುಲಿಂಗ ನಾವದಗಿ ಅವರು, ರಜೆಯ ನಂತರ ವಿಚಾರಣೆಗೆ ಆಕ್ಷೇಪ ವ್ಯಕ್ತಪಡಿಸಿದರು ಮತ್ತು ಅಕ್ಟೋಬರ್ 6 ರೊಳಗೆ ದತ್ತಾಂಶ ಸಂಗ್ರಹ ಪೂರ್ಣಗೊಳ್ಳುತ್ತದೆ ಎಂದು ನ್ಯಾಯಾಲಯಕ್ಕೆ ತಿಳಿಸಿದರು. ಆದ್ದರಿಂದ ನ್ಯಾಯಾಲಯವು ಈಗ ಮಧ್ಯಪ್ರವೇಶಿಸಬೇಕು ಎಂದರು. ಈ ವೇಳೆ ನ್ಯಾಯಾಲಯವು ದಸರಾ ರಜೆಯ ನಂತರ ಅರ್ಜಿಗಳನ್ನು ತೀರ್ಮಾನಿಸುವವರೆಗೆ ದತ್ತಾಂಶ ಸಂಗ್ರಹವನ್ನು ಮುಂದೂಡಬಹುದೇ ಎಂದು ಸರ್ಕಾರವನ್ನು ಪ್ರತಿನಿಧಿಸುವ ವಕೀಲರನ್ನು ಪ್ರಶ್ನಿಸಿತು. ರಾಜ್ಯ ಸರ್ಕಾರದ ಪರವಾಗಿ ಹಾಜರಾದ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ ಅವರು, ಪ್ರಸ್ತುತ ಸಮೀಕ್ಷೆಯು ಹಿಂದಿನ ಸಮೀಕ್ಷೆಯ ನವೀಕರಣವಾಗಿದೆ ಮತ್ತು ನ್ಯಾಯಾಲಯವು ಅದಕ್ಕೆ ತಡೆ ನೀಡಬಾರದು ಎಂದು ಹೇಳಿದರು. 2014 ರಲ್ಲಿಯೇ ಸಮೀಕ್ಷೆ ಆರಂಭಿಸಿ, 2016 ರಲ್ಲಿ ಸಮೀಕ್ಷೆ ಮುಗಿಸಿ, 2024 ರಲ್ಲಿ ವರದಿ ನೀಡಿತ್ತು. ಹಿಂದಿನ ದತ್ತಾಂಶವನ್ನು ಅಪ್‌ಡೇಟ್ ಮಾಡಲು ಸಮೀಕ್ಷೆ ನಡೆಸಲಾಗುತ್ತಿದೆ. ದಸರಾ ರಜೆಯಾಗಿರುವುದರಿಂದ ಸರ್ಕಾರದವು ಆಶಾ ಕಾರ್ಯಕರ್ತೆಯರು, ಶಿಕ್ಷಕರನ್ನು ಬಳಕೆ ಮಾಡಿಕೊಂಡು ದತ್ತಾಂಶ ಸಂಗ್ರಹಿಸಲು ಮುಂದಾಗಿದೆ ಎಂದು ಸರ್ಕಾರದ ಪರ ವಕೀಲ ಅಭಿಷೇಕ್ ಮನುಸಂಘ್ವಿ ತಿಳಿಸಿದರು. ವಾದ, ಪ್ರತಿವಾದ ಆಲಿಸಿದ ಕೋರ್ಟ್, ಅರ್ಜಿದಾರರು ಹಾಗೂ ಸರ್ಕಾರಿ ವಕೀಲರಿಗೆ ನಾಳೆ ವಾದಗಳನ್ನು ಲಿಖಿತ ರೂಪದಲ್ಲಿ ಸಲ್ಲಿಸಿ ಸೂಚಿಸಿ, ವಿಚಾರಣೆಯನ್ನು ಮಂಗಳವಾರ ಮಧ್ಯಾಹ್ನ 2.30ಕೆ ಮುಂದೂಡಿದೆ. ರಾಜ್ಯ ಒಕ್ಕಲಿಗ ಸಂಘ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ, ಉದಯ್ ಶಂಕರ್ ಬಿ.ಆರ್., ಅಖಿಲ ಕರ್ನಾಟಕ ವೀರಶೈವ-ಲಿಂಗಾಯತ ಮಹಾಸಭಾದ ಎಂಟು ಸದಸ್ಯರು, ವಕೀಲ ಕೆ.ಎನ್. ಸುಬ್ಬಾ ರೆಡ್ಡಿ ಮತ್ತು ಒಕ್ಕಲಿಗ ಸಮುದಾಯದ ಹಲವಾರು ಜನ ಜಾತಿ ಗಣತಿಗೆ ತಡೆ ಕೋರಿ ಅರ್ಜಿ ಸಲ್ಲಿಸಿದ್ದಾರೆ.

**ಏಷ್ಯಾ ಕಪ್:ಸುಪರ್ ಫೋರ್‌ನಲ್ಲಿ ಪಾಕ್‌ನ್ನು ಮಣಿಸಿದ ಭಾರತ ತಂಡ.**

# ಇಷ್ಟಲಿಂಗ ಪೂಜೆಯಿಂದ ಆರೋಗ್ಯ ಅಯುಷ್ಯ ವೃದ್ಧಿ : ಶ್ರೀ ರಂಭಾಪುರಿ ಜಗದ್ಗುರುಗಳು.

(ವರದಿ. ಡಿ. ಕೆ. ಪ್ರಹ್ಲಾದ ಜಿ.)

**ಮಲ್ಲಮ್ಮ ನುಡಿ ವಾರ್ತೆ**



ಬಸವಕಲ್ಯಾಣ :- ಸೆ 22 ಜೀವನ ವಿಕಾಸಕ್ಕೆ ಆಧ್ಯಾತ್ಮ ಜ್ಞಾನ ಅವಶ್ಯಕ. ಮಾನಸಿಕ ಶಾಂತಿ ನೆಮ್ಮದಿಗಾಗಿ ದೇವತಾರಾಧನೆ ಮಾಡಬೇಕಾಗುತ್ತದೆ. ಇಷ್ಟಲಿಂಗ ಪೂಜಾರ್ಚನೆಯಿಂದ ಮನುಷ್ಯನ ಆರೋಗ್ಯ ಮತ್ತು ಆಯುಷ್ಯ ವೃದ್ಧಿಯಾಗುತ್ತದೆ ಎಂದು ಶ್ರೀ ರಂಭಾಪುರಿ ಡಾ.ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಸೋಮವಾರ ಶರನ್ನವರಾತ್ರಿ ಅಂಗವಾಗಿ ಬಿ.ಕೆ.ಡಿ.ಬಿ.ಕಲ್ಯಾಣ ಮಂಟಪದಲ್ಲಿ ಇಷ್ಟಲಿಂಗ ಮಹಾಪೂಜಾ ನೆರವೇರಿಸಿ ಆಶೀರ್ವಚನ ನೀಡಿದರು. ವೀರಶೈವ ಧರ್ಮದಲ್ಲಿ ಇಷ್ಟಲಿಂಗ ಪೂಜೆಗೆ ಬಹಳಷ್ಟು ಮಹತ್ವಕೊಟ್ಟಿದ್ದಾರೆ. ಇಷ್ಟಲಿಂಗ ಪೂಜೆಯಿಂದ ಮನುಷ್ಯನ ಅನಿಷ್ಠಗಳು ದೂರವಾಗಿ ಇಷ್ಟಾರ್ಥಗಳು ಪ್ರಾಪ್ತಿಯಾಗುತ್ತವೆ ಎಂದು ಸಿದ್ಧಾಂತ ಶಿಖಾಮಣಿಯಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರು ಬೋಧಿಸಿದ್ದಾರೆ. ಎಲ್ಲೆಡೆ ತುಂಬಿ ಹೊಮ್ಮಿದ ಭಗವಂತನನ್ನು ಲಿಂಗರೂಪದಲ್ಲಿ ಧರಿಸಿ ಪೂಜಿಸುವ ಸತ್ಸಂಪ್ರದಾಯವಿದೆ. ದೇಹವೇ ದೇವಾಲಯ ಗುರು ಕೊಟ್ಟ ಇಷ್ಟಲಿಂಗವೇ ಆರಾಧ್ಯ ದೈವ ಎಂದು ನಂಬಿದ್ದುಂಟು. ಪ್ರತಿಯೊಬ್ಬರೂ ಸಹ ಇಷ್ಟಲಿಂಗ ಧರಿಸಿ ಪೂಜೆ ಮಾಡಲು ಅವಕಾಶವಿದೆ. ಆಸಕ್ತಿ ಶ್ರದ್ಧೆಯುಳ್ಳವರೆಲ್ಲರೂ ಇಷ್ಟಲಿಂಗಾರ್ಚನೆಯನ್ನು ಮಾಡಬಹುದು ಎಂದರು. ಈ ಪೂಜಾ ಸಂದರ್ಭದಲ್ಲಿ ಮೇಹಕರೆ ಪೂಜ್ಯಶ್ರೀ ರಾಜೇಶ್ವರ ಶಿವಾಚಾರ್ಯರು. ತ್ರಿಪುರಾಂತನ ಪೂಜ್ಯ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು. ಯಡಿಯೂರು,ಹುಡುಗಿ,ಸಿದ್ಧರಬೆಟ್ಟ, ಕಪಿಲಧಾರಾ, ಮಳಲಿ ಮತ್ತು ಸಂಗೊಳ್ಳಿ ಮಠದ ಶ್ರೀಗಳು ಪಾಲ್ಗೊಂಡಿದ್ದರು. ಇಷ್ಟಲಿಂಗ ಪೂಜೆಗಾಗಿ ಮಹಿಳೆಯರು ಅಗ್ರೋದಕವನ್ನು ಹೊತ್ತು ತಂದು ಪೂಜಾಭಿಷೇಕ ನೆರವೇರಿಸಿದ ದೃಶ್ಯ ಅಪೂರ್ವವಾಗಿತ್ತು.

# ಅನಧಿಕೃತ ಮಾಂಸದ ಅಂಗಡಿಗಳು ತೆರವುಗೊಳಿಸಲು ಮುಖ್ಯಾಧಿಕಾರಿಗಳಿಗೆ ಪತ್ರ

**ಮಲ್ಲಮ್ಮ ನುಡಿ ವಾರ್ತೆ**



ಚಿಟಗುಪ್ಪ:- ಪಟ್ಟಣದ ನೆಹರು ಚೌಕ ಹತ್ತಿರ ಕೆಲವು ವರ್ಷಗಳಿಂದ ಹಲವಾರು ಅನಧಿಕೃತ ಮಾಂಸದ ಅಂಗಡಿಗಳಿಂದ ಅಲ್ಲಿನ ಅಕ್ಕಪಕ್ಕದ ಮನೆಯವರಿಗೆ ಹಾಗೂ ವ್ಯಾಪಾರಸ್ಥರಿಗೆ ಅದರ ದುರ್ವಾಸನೆಯಿಂದ ಅಲ್ಲಿ ವಾಸಿಸಲು ಬಹಳಷ್ಟು ತೊಂದರೆ- ಯಾಗುತ್ತಿದೆ ಎಂದು ಸೋಮವಾರ ಪುರಸಭೆ ಮುಖ್ಯಾಧಿಕಾರಿ ಹುಸಾಮುದ್ದೀನ್ ಬಾಬಾ ಅವರಿಗೆ ವಿಶ್ವಹಿಂದೂ ಪರಿಷತ್ ಬೀದರ ಹಾಗೂ ಬಜರಂಗದಳ ಮನವಿ ಪತ್ರ ಸಲ್ಲಿಸಿದ್ದಾರೆ. ಅನಧಿಕೃತ ಮಾಂಸದ ಅಂಗಡಿಗಳು ಕೂಡಲೇ ತೆರವುಗೊಳಿಸಬೇಕು ಒಂದು ವೇಳೆ ವಿಳಂಬ ಮಾಡಿ ತೆರವುಗೊಳಿಸದೆ ಇದ್ದಲ್ಲಿ ವಿಶ್ವ ಹಿಂದೂ ಪರಿಷತ್ ಬೀದರ್ ಹಾಗೂ ಬಜರಂಗ ದಳ ಉಗ್ರ ಹೋರಾಟ ಮಾಡುತ್ತದೆ ಎಂದು ಬರೆದ ಮನವಿ ಪತ್ರದಲ್ಲಿ ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ತಾಲೂಕ ಗೋರಕ್ಷಕ ಪ್ರಮುಖ ಸಂದೀಪ ರೋಹಿಲೆ, ರಾಜು ಪೂಜಾರಿ, ಸಂದೀಪ,ಉಮೇಶರೆಡ್ಡಿ,ಗುರುಪಾದ, ದತ್ತು ಹಲಗಿ, ಸಾಯಿಕುಮಾರ್ ಸಿರ್ಕೆ, ಪ್ರವೀಣ್, ರೋಹನ್ ಸಿರ್ಕೆ, ವಿಶಾಲ್ ಪೂಜಾರಿ, ರವಿ ಕೊಂಡ, ಅಮರ ರೆಡ್ಡಿ, ಸಿದ್ದು ಪಾಟೀಲ್, ಸುರೇಶ್, ಶಿವ ಗೌಳಿ, ಶ್ರೀಕಾಂತ ರೆಡ್ಡಿ, ನಾಗೇಶ್ ಗಾಜುಲ್, ನಾಗೇಶ್ ಪಾಟೀಲ್, ವಿಜಯಕುಮಾರ್ ಸೇರಿದಂತೆ ಇತರರು ಇದ್ದರು.

# ವೈಚಾರಿಕ ಚಿಂತನಗೆ ಅವಕಾಶ




**ಮಲ್ಲಮ್ಮ ನುಡಿ ವಾರ್ತೆ**

ಬಸವಕಲ್ಯಾಣ :- ಸೆ 22 ಇಲ್ಲಿನ ಹಿರಿಯ ಚಿಂತಕರಾದ ಹಾಗೂ ಜಿಲ್ಲಾ ನಿವೃತ್ತ ನ್ಯಾಯಾಧೀಶರಾದ ಸುಭಾಷಚಂದ್ರ ನಾಗರಾಳೆ ಯವರ ಅರಿವು ಆಚಾರ ಅನುಭವ ಕೇಂದ್ರದಲ್ಲಿ ಅಷ್ಟಾವರಣ ಪಂಚಾಚಾರ ಅಲ್ಲದೆ ಷಟಸ್ಥಲ ಕುರಿತು ಅನೇಕರು ಸಹ ವಿಸ್ತಾರವಾಗಿ ಚರ್ಚಿಸಿದ್ದರು. ಇಂದಿನ ಪ್ರಸ್ತುತ ಸಮಯದಲ್ಲಿ ಇಂತಹ ವೈಚಾರಿಕ ಚಿಂತನೆಗೆ ಸ್ಥಳಾವಕಾಶ ನೀಡುವುದರೊಂದಿಗೆ ಸ್ವತಃ ಅವರು ಸಹ ಮುತುವರ್ಜಿ ವಹಿಸಿ ವಚನಗಳ ಆಳವಾದ ಅಧ್ಯಯನ ಬಸವ ಮಯವಾದ ಅವರ ನಿವಾಸ ನೋಡುವುದೆ ಒಂದು ರೀತಿಯ ಸಂತೋಷ. ಅನುಭವ ಮಂಟಪದ ಸಂಚಾಲಕರಾದ ಪೂಜ್ಯಶ್ರೀ ಶಿವಾನಂದ ದೇವರು. ನಿವೃತ್ತ ಮುಖ್ಯ ಗುರುಗಳಾದ ಭಿಮಾಶಂಕರ ಮಾಶಳಕರ್. ಶಿವಕುಮಾರ ಬಿರಾದಾರ. ಶಿಕ್ಷಕರಾದ ನಾಗಪ್ಪಾ ನಿಣ್ಣೆ. ಮಲ್ಲಿಕಾರ್ಜುನ ಅಲಗೂಡೆ. ನೀಲಕಂಠಯ್ಯ ಸ್ವಾಮಿ. ಶರಣಪ್ಪಾ ಕಾರಮುಂಗೆ. ವಿಜಯಕುಮಾರ ನಾಗರಾಳೆ. ಸೇರಿದಂತೆ ಅನೇಕರು ಭಾಗವಹಿಸಿ ಜ್ಞಾನ ದಾಸೋಹದೊಂದಿಗೆ ಅನ್ನದಾಸೋಹ ಸಹ ಸೇವಿಸಲಾಯಿತ್ತು.

# ಬಾಳೆಹೊನ್ನೂರು ಶ್ರೀಮದ್ ರಂಭಾಪುರಿ ಜಗದ್ಗುರುಗಳವರ ಭವ್ಯವಾದ ಮೆರವಣಿಗೆ



**ಮಲ್ಲಮ್ಮ ನುಡಿ ವಾರ್ತೆ**

ಬಸವಕಲ್ಯಾಣ :- ಸೆ 22 ನಗರದಲ್ಲಿ ಅಕ್ಟೋಬರ್ 2 ರವರೆಗೆ ನಡೆಯುವ

ಶರನ್ನವರಾತ್ರಿ ದಸರಾ ಧರ್ಮ ಸಮ್ಮೇಳನಕ್ಕಾಗಿ ರವಿವಾರ ನಗರಕ್ಕೆ ಆಗಮಿಸಿದ ಬಾಳೆಹೊನ್ನೂರು ಶ್ರೀಮದ್ ರಂಭಾಪುರಿ ಜಗದ್ಗುರುಗಳಿಗೆ ತಿಪುರಾಂತಿನ ಹನುಮಾನ ಬಳಿ ಭವ್ಯವಾದ ಸ್ವಾಗತ ನೀಡಿ ಇಲ್ಲಿಂದಲೆ ಅಲಂಕೃತ ಸಾರೋಟಿನಲ್ಲಿ ನಗರದ ಪ್ರಮುಖ ರಸ್ತೆಗಳ ಮೂಲಕ ಅಕ್ಕ ಮಹಾದೇವಿ ಮಹಿಳಾ ಮಹಾವಿದ್ಯಾಲಯದ ಆವರಣದವರೆಗೆ ಮೆರವಣಿಗೆ ಜರುಗಿತು. ಬಾಜಾ. ಭಜಂತ್ರಿ. ಡೋಳಿನ ಕಲಾವಿದರ ತಂಡ ಪ್ರದರ್ಶನದೊಂದಿಗೆ ನಡೆದ ಮೆರವಣಿಗೆಯಲ್ಲಿ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡಿದ್ದರು. ಪುರವಂತರಿಂದ ನಡೆದ ಪ್ರದರ್ಶನ ಗಮನ ಸೆಳೆಯಿತು. ಈ ಸಂದರ್ಭದಲ್ಲಿ ತಡೋಳಾ ಪೂಜ್ಯಶ್ರೀ ರಾಜೇಶ್ವರ ಶಿವಾಚಾರ್ಯರು. ತಿಪುರಾಂತಿನ ಗವಿಮಠದ ಪೂಜ್ಯಶ್ರೀ ಡಾ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು. ತಾಂಬೋಳದ ಪೂಜ್ಯ ಶ್ರೀ ವಿಜಯ ಮಹಾಸ್ವಾಮಿಜಿಗಳು ಸೇರಿದಂತೆ ಅನೇಕ ಪೂಜ್ಯರು ಇದ್ದರು. ಶಾಸಕರಾದ ಶರಣು ಸಲಗರ್. ಸೋಮಶೇಖರ ವಸ್ತ್ರದ. ಬಸವಂತಪ್ಪ ಲವಾರೆ. ಸೂರ್ಯಕಾಂತ ಶೀಲವಂತ. ವೀರಣ್ಣಶೀಲವಂತ. ದಯಾನಂದ್ ಶೀಲವಂತ. ರುದ್ರೇಶ ಸ್ವಾಮಿ ಗೋರ್ಟಾ. ಎಮ್. ಕೆ. ನಂದಿ. ಸುರೇಶ ಸ್ವಾಮಿ. ಸುನೀಲ ಪಾಟೀಲ. ರಮೇಶ್ ರಾಜೋಳೆ. ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ಜಿಎಸ್ ಟಿ ದರ ಇಳಿಕೆ: ಬಿಜೆಪಿ ಜಿಲ್ಲಾ ಘಟಕದಿಂದ ಸಂಭ್ರಮಾಚರಣೆ..

**ಮಲ್ಲಮ್ಮ ನುಡಿ ವಾರ್ತೆ**



ಯಾದಗಿರಿ:-ಕೇಂದ್ರ ಸರಕಾರ ಕೆಲ ಸರಕು ಮತ್ತು ಸೇವಾ ತೆರಿಗೆ (ಜಿಎಸ್ಟಿ)ಗಳ ದರ ಇಳಿಕೆ ಮಾಡಿದ್ದನ್ನು ಸ್ವಾಗತಿಸಿ ಬಿಜೆಪಿ ವತಿಯಿಂದ ನಗರದಲ್ಲಿಂದು ಸಂಭ್ರಮಾಚರಣೆ ನಡೆಯಿತು.

ನಗರದ ಗಾಂಧಿ ವೃತ್ತದಲ್ಲಿ ಜಿಲ್ಲಾ ಬಿಜೆಪಿ ಘಟಕದ ವತಿಯಿಂದ ಆಯೋಜಿಸಿದ ಜಿಎಸ್ಟಿ ಇಳಿಕೆಗೆ ಉಡುಗೊರೆ ಮೋದಿ ಸರಕಾರಕ್ಕೆ ಧನ್ಯವಾದಗಳು ಘೋಷ ವಾಕ್ಯದ ಅಡಿಯಲ್ಲಿ ಪರಸ್ಪರ ಸಿಹಿ ಹಂಚಿ ಸಂಭ್ರಮಿಸಿದರು. ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಬಸವರಾಜ ವಿಭೂತಿಹಳ್ಳಿ ಮಾತನಾಡಿ ಅವರು ಕೇಂದ್ರ ಸರಕಾರ ಜಿಎಸ್ ಟಿ ಇಳಿಕೆ ಮಾಡಿ ಜನರಿಗೆ ನವರಾತ್ರಿ ಉಡುಗೊರೆ ನೀಡಿದೆ. ದೇಶದ ಇತಿಹಾಸದಲ್ಲಿ ಜಿಎಸ್ ಟಿ ಏರಿಸಿದ್ದನ್ನು ಇಷ್ಟು ದೊಡ್ಡ ಮಟ್ಟದಲ್ಲಿ ಇಳಿಸಿದ ಉದಾಹರಣೆ ಇಲ್ಲ. ನರೇಂದ್ರ ಮೋದಿ ಈ ಕೆಲಸ ಮಾಡಿ ಬಡ, ಮಧ್ಯಮ ವರ್ಗದ ಜನರಿಗೆ ಅನುಕೂಲ ಮಾಡಿದ್ದಾರೆ ಎಂದು ಸಂತಸ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಈ ಸಂದರ್ಭದಲ್ಲಿ ರಾಜ್ಯ ಕಾರ್ಯದರ್ಶಿ ಮತ್ತು ನಗರಸಭೆ ಅಧ್ಯಕ್ಷೆ ಲಲಿತಾ ಅನಪುರ ಬಿಜೆಪಿ ಹಿರಿಯ ಮುಖಂಡೆ ನಾಗರತ್ನ ಕುಪ್ಪಿ,ಯುವ ಮುಖಂಡ ಮಹೇಶರಡ್ಡಿ ಮುದ್ನಾಳ,ದೇವೇಂದ್ರನಾಥ ನಾದ್,ಸಿದ್ದಣ್ಣಗೌಡ ಕಾಡಂನೋರ, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಗುರು ಕಾಮಾ ಮತ್ತು ಪರಶುರಾಂ ಕುರಕುಂದಾ, ಜಿಲ್ಲಾ ವಕ್ತಾರ ಮತ್ತು ನಗರಸಭೆ ಸದಸ್ಯ ಹಣಮಂತ ಇಟಗಿ, ಯುವ ಮೋರ್ಚಾ ಜಿಲ್ಲಾಧ್ಯಕ್ಷ ಶ್ರೀಧರ ಆರ್ ಸಾಹುಕಾರ,ವೆಂಕಟರೆಡ್ಡಿ ಅಬ್ಬೆತೂಮಕುರ,ಬಸವರಾಜು ಸೊನ್ನದ, ಮಲ್ಲಿಕಾರ್ಜುನ ಹೊನಿಗೇರಿ,ನಗರ ಮಂಡಲ ಅಧ್ಯಕ್ಷ ಲಿಂಗಪ್ಪ ಹತ್ತಿಮನಿ, ಗ್ರಾಮೀಣ ಮಂಡಲ ಅಧ್ಯಕ್ಷ ರಾಜಶೇಖರ್ ಕಾಡಂನೊರ,ನಗರಸಭೆ ಉಪಾಧ್ಯಕ್ಷೆ ರುಕೀಯ್ ಬೇಗಂ, ಸುನಿತಾ ಚೌವ್ಹಾಣ್,ನಗರಸಭೆ ಸದಸ್ಯ ಸ್ವಾಮಿದೇವ ದಾಸನಕೇರಿ, ವಿಜಯಲಕ್ಷ್ಮಿನಾಯಕ,ವೀಣಾಮೋದಿ, ಚನ್ನವೀರಯ್ಯ ಸ್ವಾಮಿ,ಶಕುಂತಲಾ ಜಿ,ಶಿವಣ್ಣ ಬಡಿಗೇರ,ಮೋನೇಶ ಬೆಳಿಗೇರಿ,ಮಲ್ಲಿಕಾರ್ಜುನ ಕಟ್ಟಿಮನಿ,ಲಕ್ಷ್ಮಿಪುತ್ರ ಮಾಲಿಪಾಟೀಲ,ಸಾಬು ಚಂಡ್ರಿಕಿ, ಮಂಜುನಾಥ ಗುತ್ತೆದಾರ,ಮಲ್ಲು ಕೊಲಿವಾಡ,ನಾಗಪ್ಪ ಗಚ್ಚಿಮನಿ, ಚಂದ್ರಶೇಖರ ಕಡೆಸುರ, ಬಸ್ಸು ಬಳಿಚಕ್ರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



ಚಿಟಗುಪ್ಪ:- ಪಟ್ಟಣದ ಐತಿಹಾಸಿಕ ಶ್ರೀ ಹಿಂಗುಲಾಂಬಿಕಾ ದೇವಿ ಮಂದಿರದಲ್ಲಿ ಶಾರದಿಯ ನವರಾತ್ರ ಮಹೋತ್ಸವ ಕುರಿತು ಮಂದಿರದಲ್ಲಿ ರವಿವಾರ ತಾಯಿಯ ವಿಶೇಷ ಪೂಜೆ ಸಲ್ಲಿಸಿ ಘಟಸ್ಥಾಪನೆ ಮಾಡಿ ಶ್ರೀ ದೇವಿಯನ್ನು ವಿಗ್ರಹ ಪ್ರತಿಷ್ಠಾಪನೆ ಮಾಡಲಾಯಿತು. ಈ ಸಂದರ್ಭದಲ್ಲಿ ಭಾವಸಾರ ಕ್ಷತ್ರಿಯ ಸಮಾಜದ ಅಧ್ಯಕ್ಷ ಉತ್ತಮರಾವ ಧುಮಾಳೆ, ಉಪಾಧ್ಯಕ್ಷ ರಾಮರಾವ ಮಹಿಂದ್ರಕರ, ಕಾರ್ಯದರ್ಶಿ ಅಶೋಕರಾವ ಗಂಟೋಜಿ, ಭಾವಸಾರ ತರುಣ ಮಂಡಳದ ಅಧ್ಯಕ್ಷ ಮಹೇಶ ಮಹೇಂದ್ರಕರ, ಪ್ರವೀಣ ದಂತಕಾಳೆ, ಶುಭಂ ರಂಗದಳ, ಸತೀಶ ಮಹಿಂದ್ರಕರ, ಜೀವನ ವೈಚೇಳೆ, ಸತೀಶ ಹಿರಾಸ್ಕರ್, ಸಂಜು ಮಹಿಂದ್ರಕರ, ಜಟಿಂಗರಾವ ಮಹಿಂದ್ರಕರ, ನರ್ಸಿಂಗ, ಕೃಷ್ಣಾ, ಅಮೀತ, ಗಣೇಶ ಸೇರಿದಂತೆ ಸಮಾಜದ ಗಣ್ಯರು ಉಪಸ್ಥಿತರಿದ್ದರು. (ಮಲ್ಲಮ್ಮ ನುಡಿ ಚಿತ್ರ)

# ಅಥ್ಲೆಟಿಕ್ಸನಲ್ಲಿ ರಾಜ್ಯ ಮಟ್ಟಕ್ಕೆ ಬಾಲಕಿಯರ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿಯರು ಆಯ್ಕೆ



**ಮಲ್ಲಮ್ಮ ನುಡಿ ವಾರ್ತೆ**

ಚಿಟಗುಪ್ಪ:- ಇಲ್ಲಿಯ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿಯರು ಬೀದರ ಜಿಲ್ಲಾ ಮಟ್ಟದ ಪದವಿ ಪೂರ್ವ ಕಾಲೇಜುಗಳ ಕ್ರೀಡಾಕೂಟದಲ್ಲಿ ಅಥ್ಲೆಟಿ- ಕ್ಸ್ ವಿಭಾಗದಲ್ಲಿ ಪ್ರಥಮ ವರ್ಷದ ಕಲಾ ವಿದ್ಯಾರ್ಥಿನಿಯರು ವಿವಿಧ ವಿಭಾಗದಲ್ಲಿ ಗೆಲುವು ಸಾಧಿಸಿದ್ದಾರೆ. ನಡಿಗೆ ಸ್ಪರ್ಧೆಯಲ್ಲಿ ಮಾನ್ಯತಾ ಮಚೇಂದ್ರನಾಥ ಪ್ರಥಮ ಸ್ಥಾನ, ತಿಪ್ಪಮ್ಮ ಚಂದ್ರಪ್ಪ ದ್ವಿತೀಯ ಸ್ಥಾನ ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. 800 ಮೀ. ಓಟದಲ್ಲಿ ಸೋನಿಕ ಮಾರುತಿ ದ್ವಿತೀಯ ಸ್ಥಾನ ಪಡೆದಿದ್ದಾಳೆ. 1500 ಮೀ. ಓಟದಲ್ಲಿ ಪೂಜಾ ನರಸಿಂಗ ದ್ವಿತೀಯ ಸ್ಥಾನ ಪಡೆಯುವ ಮೂಲಕ ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿ ಕಾಲೇಜಿಗೆ ಕೀರ್ತಿಯನ್ನು ತಂದಿದ್ದಾರೆ. ಸಾಧನೆಗೆ ಮಾರ್ಗದರ್ಶನ ನೀಡಿದ ಅನುಪ್ರಿಯಾ ಹಾಗೂ ಅಂಬಿಕಾ ಅವರಿಗೂ ಹಾಗೂ ವಿದ್ಯಾರ್ಥಿನಿಯರಿಗೂ ಕಾಲೇಜಿನ ಪ್ರಾಂಶುಪಾಲ ರಾಜೇಂದ್ರ ಆರ್. ಚವ್ಹಾಣ, ಕಾಲೇಜಿನ ಉಪನ್ಯಾಸಕರು, ಸಿಬ್ಬಂದಿ ವರ್ಗದವರು ಹರ್ಷ ವ್ಯಕ್ತಪಡಿಸಿ ಅಭಿನಂದನೆ ಸಲ್ಲಿಸಿದರು.

# ಕಲೆ ಮತ್ತು ವಾಸ್ತು ಶಿಲ್ಪಕ್ಕೆ ವಿಶ್ವಕರ್ಮರ ಕೊಡುಗೆ ಅಪಾರ:ಶಾಸಕ ಪಾಟೀಲ್

**ಮಲ್ಲಮ್ಮ ನುಡಿ ವಾರ್ತೆ**




ಚಿಟಗುಪ್ಪ:- ಪುರಾತನ ಕಾಲದಿಂದಲೂ ಕಲೆ ಮತ್ತು ವಾಸ್ತುಶಿಲ್ಪಕ್ಕೆ ವಿಶ್ವಕರ್ಮರ ಕೊಡುಗೆ ಅಪಾರ ಎಂದು ಶಾಸಕ ಡಾ. ಸಿದ್ದು ಪಾಟೀಲ ತಿಳಿಸಿದರು. ಪಟ್ಟಣದ ಜಗದ್ಗುರು ಶ್ರೀ ಮೌನೇಶ್ವರ ಮಂದಿರದಲ್ಲಿ ತಾಲೂಕು ವಿಶ್ವಕರ್ಮ ಸಮಾಜ ಆಯೋಜಿಸಿದ ವಿಶ್ವಕರ್ಮ ಪೂಜಾ ಮಹೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಪುರಾಣಗಳಲ್ಲಿ ಭಗವಾನ್ ವಿಶ್ವಕರ್ಮ ಅವರನ್ನು ಸ್ವರ್ಗ ಮತ್ತು ಭೂಮಿ ಸೃಷ್ಟಿಸಿದ ದೈವಿಕ ವಾಸ್ತುಶಿಲ್ಪಿ ಎಂದು ಪೂಜಿಸಲಾಗುತ್ತದೆ. ದೇವರ ಅರಮನೆ,ದೈವಿಕ ಆಯುಧಗಳು ಮತ್ತು ಪ್ರಾಚೀನ ಗ್ರಂಥಗಳಲ್ಲಿ ಉಲ್ಲೇಖಿಸಲಾದ ಅನೇಕ ಮಹತ್ವದ ವಾಸ್ತುಶಿಲ್ಪ ವಿನ್ಯಾಸಗೊಳಿಸಿದ ಕೀರ್ತಿ ವಿಶ್ವಕರ್ಮಗೆ ಸಲ್ಲುತ್ತದೆ ಎಂದು ತಿಳಿಸಿದರು. ತಾಲೂಕಿನಲ್ಲಿ ವಿಶ್ವಕರ್ಮ ಏಕದಂಡಗಿ ಶ್ರೀಮಠದ ಶಾಖಾಮಠದ ನಿರ್ಮಾಣಕ್ಕೆ ಅಗತ್ಯ ನೆರವು ನೀಡಲಾಗುವುದು. ಆದಷ್ಟು ಬೇಗ ಕೆಲಸ ಆರಂಭವಾಗಲಿದೆ ಎಂದರು. ಯಾದಗಿರಿ ಆನೆಗುಂದಿ ಮಹಾಸಂಸ್ಥಾನ ಸರಸ್ವತಿ ಪೀಠದ ಶ್ರೀನಿವಾಸ ಮಹಾಸ್ವಾಮಿಗಳು ಮಾತನಾಡಿ, ವಿಶ್ವಕರ್ಮರು ವೈದೀಕ ಪರಂಪರೆಯೊಂದಿಗೆ ತನ್ನ ಪಂಚಕಸುಬುಗಳನ್ನು ಉಳಿಸಿ ಬೆಳೆಸಿಕೊಂಡು ಬರುತ್ತಿದ್ದೇವೆ. ವಿಶ್ವ ಬ್ರಾಹ್ಮಣ ಸಮಾಜವು ಯಾವುದೇ ಫಲಾಪೇಕ್ಷೆ ಇಲ್ಲದೇ ತನ್ನ ಕಾಯಕವನ್ನು ಮಾಡತ್ತಾ ಬಂದಿದೆ. ಇಂದಿನ ಆಧುನಿಕ ಯುಗದ ಹೈಟೇಕ ತಂತ್ರಜ್ಞಾನವನ್ನು ಬಳಸಿ ಮಾಡದೆ ಇರುವ ಅದೇಷ್ಟೋ ದೊಡ್ಡ ಮಠ ಮಂದಿರಗಳು ನಿರ್ಮಿಸಿವೆ. ನಮ್ಮ ಶಿಲ್ಪಾಚಾರ್ಯರು ವೈಜ್ಞಾನಿಕ, ಧಾರ್ಮಿಕವಾಗಿಯೂ ಮತ್ತು ಶಾಸ್ತ್ರಸಮ್ಮತವಾಗಿಯೂ ಶಿಲ್ಪಗಳ ರಚಿಸಿದ್ದಾರೆ. ಜಿಲ್ಲಾ ವಿಶ್ವಕರ್ಮ ಸಮಾಜದ ಅಧ್ಯಕ್ಷರು ಹಾಗೂ ಎಲ್ಲಾ ಪದಾಧಿಕಾರಿಗಳು ಜಿಲ್ಲೆಯಾದ್ಯಂತ ಸಂಚರಿಸಿ ಸಮಾಜ ಸಂಘಟನೆಗೆ ಶ್ರಮಿಸುತ್ತಿರುವುದು ಹೆಮ್ಮೆಯ ವಿಷಯವಾಗಿದೆ ಎಂದರು.

> ಶಿಲ್ಪಾಚಾರ್ಯರು ಖಗೋಳಶಾಸ್ತ್ರ, ವಿಜ್ಞಾನ ಮತ್ತು ಶಾಸ್ತ್ರ ಸಮ್ಮತ ಯಾವ ಮೂರ್ತಿ ಯಾವ ರೀತಿ ಇರಬೇಕು. ಅಳತೆ ಪ್ರಮಾಣ ಇತ್ಯಾದಿಗಳನ್ನು ನಿಖರವಾಗಿ ಮಾಡಿ ರಚಿಸಿದ್ದಾರೆ. ಅಂದು ರಾಜ ಮಹಾರಾಜರು ಶಿಲ್ಪಾಚಾರ್ಯರಿಗೆ, ಸ್ಥಪತಿಗಳಿಗೆ ರಾಜಾಶ್ರಯ ದೊರೆಯುತಿತ್ತು. ಭಾರತೀಯ ಭವ್ಯ ಸಂಸ್ಕೃತಿಗೆ ಶ್ರೇಷ್ಠ ಕೊಡುಗೆ ನೀಡಿದ ಸಮಾಜ ಇಂದಿಗೂ ರಾಜಕೀಯವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವುದು ನೋವಿನ ವಿಷಯವಾಗಿದೆ.
>
> -ಶ್ರೀನಿವಾಸ ಮಹಾಸ್ವಾಮಿಗಳು ಏಕದಂಡಗಿ ಮಠ ಯಾದಗಿರ, ಹುಮನಾಬಾದ.

ಹಿರೇಮಠ ಗುರುಲಿಂಗ ಶಿವಾಚಾರ್ಯರು ಮಾತನಾಡಿ, ನಮ್ಮ ಮನೆಯ ದೇವರ ಕೋಣೆಯಲ್ಲಿರುವ ಪುಟ್ಟ ವಿಗ್ರಹದಿಂದ ಹಿಡಿದು ಬಾನೆತ್ತರಕ್ಕೆ ನಿಂತ ಬಾಹುಬಲಿಯನ್ನು ನಿರ್ಮಿಸಿದ ವಿಶ್ವಕರ್ಮ ಸಮಾಜ ಎಲ್ಲರಿಗೂ ಆದರ್ಶವಾಗಿದೆ. ಮಂದಿರ ಮಸಿದಿ ಚರ್ಚ ಯಾವುದೇ ಭೇದವಿಲ್ಲದೇ ಅವುಗಳನ್ನು ರೂಪಿಸಿಕೊಟ್ಟಿದ್ದಾರೆ. ವಿಶ್ವಕರ್ಮ ಸಮೂದಾಯ ಮಠ ಮಂದಿರಗಳನ್ನು ನಿರ್ಮಿಸದೆ ಇದ್ದರೆ ಭಾರತೀಯ ಸಂಸ್ಕೃತಿಯ ಗತಿ ಏನಾಗುತಿತ್ತು.

ಭಾರತೀಯ ಶಿಲ್ಪದ ಕಡೆಗೆ ಇಡಿ ವಿಶ್ವವೇ ಆಗಮಿಸುತ್ತಿದೆ ಎಂದರೆ. ಜಿಲ್ಲಾಧ್ಯಕ್ಷ ದತ್ತಾತ್ರಿ ವಿಶ್ವಕರ್ಮ,ಮಹೇಶ ವಿಶ್ವಕರ್ಮ, ಕೃಷ್ಣಚಾರ್ಯ ಪುರೋಹಿತರು ಮೀನಕೇರಾ, ಸಿದ್ಧಾರೂಢ ವಿಶ್ವಕರ್ಮ,ಅಶೋಕ ಪಂಚಾಳ, ಭೀಮೇಶ ಪಂಚಾಳ, ಪ್ರಭಾಕರ ಶಾಸ್ತ್ರಿ, ಸುದರ್ಶನ್ ವಿಶ್ವಕರ್ಮ, ಸೇರಿದಂತೆ ಪಟ್ಟಣದ ಗಣ್ಯರು ಸಮಾಜದ ಪ್ರಮುಖರು, ಮಹಿಳಾ ತಾಯಂದಿರು, ಮಕ್ಕಳು ಉಪಸ್ಥಿತರಿದ್ದರು. ರವೀಂದ್ರ ಪಂಚಾಳ ನಿರೂಪಿಸಿ ವಂದಿಸಿದರು.

# ಧರ್ಮ ಬೌದ್ಧ ಜಾತಿ ಹೊಲೆಯ ಎಂದು ಬರೆಸಿ

**ಮಲ್ಲಮ್ಮ ನುಡಿ ವಾರ್ತೆ**



ಶಹಾಪೂರ: ಡಾಕ್ಟರ್ ಬಾಬಾಸಾಹೇಬ್ ಅಂಬೇಡ್ಕರ್ ಅವರು ಈ ದೇಶದ ಸಮಸ್ತ ಶೋಷಿತಜಾತಿಗಳ ಮಾರ್ಗದಾತರು. ಅವರ ಮಾರ್ಗದಲ್ಲಿ ನಾವು ಸಾಗಿದರೆ ಮಾತ್ರ ನಮ್ಮ ಶತ ಶತಮಾನಗಳ ಗುಲಾಮಗಿರಿ ಮತ್ತು ಶೋಷಣೆಯಿಂದ ಮುಕ್ತಿ ಸಿಗುತ್ತದೆ. ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು 1935 ಅಕ್ಟೋಬರ್ 13 ರಂದು ಏವೋಲಾ ಸಮ್ಮೇಳನದಲ್ಲಿ ನಾನು ಇಂದು ಆಗಿ ಹುಟ್ಟಿದ್ದೇನೆ ಆದರೆ ಇಂದು ಆಗಿ ಸಾಯಲಾರೆ ಎಂದು ಘೋಷಣೆ ಮಾಡಿದರು. ಅದರಂತೆ 1956 ಅಕ್ಟೋಬರ್ 14 ರಂದು ನಾಗಪುರದಲ್ಲಿ ತಮ್ಮ 5ಲಕ್ಷ ಅನುಯಾಯಿಗಳೊಂದಿಗೆ ಬೌದ್ಧ ಧರ್ಮ ಸ್ವೀಕಾರ ಮಾಡಿದರು. ಅದರಂತೆ ನಾವು ಈಗ ಅಂಬೇಡ್ಕರ್ ಅವರ ಕನಸನ್ನು ನನಸು ಮಾಡಬೇಕೆಂದರೆ ದಿನಾಂಕ 22-9-2025 ರಿಂದ 7-10-2025 ವರೆಗೆ ನಡೆಯಲಿರುವ ಜಾತಿ ಗಣತಿಯಲ್ಲಿ ಕಾಲಂ 8 ಧರ್ಮ ಬೌದ್ಧ( ಕ್ರ.ಸಂಖ್ಯೆ6) ಕಾಲಂ 9 ಜಾತಿ ಪರಿಶಿಷ್ಟ ಜಾತಿ ಹೊಲೆಯ ಕಾಲಂ 10 ಉಪಜಾತಿ ಹೊಲೆಯ ಎಂದು ಬರಿಸಬೇಕು ಬೌದ್ಧ ಧರ್ಮಕ್ಕೆ ಸೇರಿದರೆ ಸಂವಿಧಾನದ ಅಡಿಯಲ್ಲಿ ಶಿಕ್ಷಣ ಉದ್ಯೋಗ ರಾಜಕೀಯ ಮೀಸಲಾತಿಗಳನ್ನು ಪಡೆಯಲು ಅವಕಾಶ ಇರುತ್ತದೆ ಭಯಪಡುವುದು ಬೇಡ ಹೊನ್ನಪ್ಪ ಗಂಗನಾಳ ರಾಜ್ಯ ಸಂಘಟನಾ ಕಾರ್ಯದರ್ಶಿ ಮಾಳಪ್ಪ ಸಲಾದಪುರ ಸುಭಾಷ್ ತಳವಾರ್ ಶರಣಪ್ಪ ಭೂತಾಳೆ ನಾಗರಾಜ ಬೊಮ್ಮನಹಳ್ಳಿ ಈ ಮೂಲಕ ಮನವಿ ಮಾಡಲಾಗಿದೆ

# ದೈಹಿಕ ಮಾನಸಿಕ ಸದೃಢತೆಗೆ ಪ್ರತಿಯೊಬ್ಬರು ಕ್ರೀಡಾಸಕ್ತಿ ಬಳಸಿಕೊಳ್ಳಬೇಕು : ಪಟೇಲ್



**ಮಲ್ಲಮ್ಮ ನುಡಿ ವಾರ್ತೆ**

ಕೊಪ್ಪಳ : ಪ್ರತಿಯೊಬ್ಬ ಮನುಷ್ಯನ ದೈಹಿಕ ಮಾನಸಿಕ ಸದೃಢತೆಗಾಗಿ ಕ್ರೀಡಾಸಕ್ತಿ ಬೆಳೆಸಿಕೊಳ್ಳುವುದು ಒಳ್ಳೆಯದು ಎಂದು ಕೊಪ್ಪಳ ನಗರಸಭೆಯ ಅಧ್ಯಕ್ಷರಾದ ಅಮ್ಜದ್ ಪಟೇಲ್ ಹೇಳಿದರು, ಅವರು ನಗರದ ಹೊರವಲಯ ಚುಕುನಕಲ್ ರಸ್ತೆ, ಸ್ವಾಮಿ ವಿವೇಕಾನಂದ ಶಾಲೆ ಹತ್ತಿರ ಜಮೀಲ್ ಹುಸೇನ್ ಪೈಮಾಸಿ ಮತ್ತು ಯಾಕೂಬ ಸಾಬ್ ಕಮ್ಮಾರ್ ಹಾಗೂ ಹುಸೇನ್ ಸಾಬ್ ಪೈಮಾಸಿ ರವರುಗಳು ಸೇರಿ ಕೊಂಡು ನೂತನವಾಗಿ ಪ್ರಾರಂಭಿಸಿದ ರಾಯಲ್ ಟರ್ಫ್ ಎಂಬ ಕ್ರೀಡಾ ಕೇಂದ್ರದ ಉದ್ಘಾಟನೆ ನೆರವೇರಿಸಿ ಮಾತನಾಡಿ ಕ್ರಿಕೆಟ್, ವಾಲಿಬಾಲ್, ಫುಟ್ಬಾಲ್ ಮತ್ತು ಯೋಗ ಇಂತಹ ಉತ್ತಮವಾದಂತಹ ಮತ್ತು ಯಾವಾಗ್ಲೂ ಮನುಷ್ಯನ ಆರೋಗ್ಯ ವೃದ್ಧಿ ಯಾಗುವಂತಹ ಕ್ರೀಡಾ ಕೇಂದ್ರ ಇಲ್ಲಿ ಆರಂಭಗೊಂಡಿದ್ದು ಇದರಲ್ಲಿ ಪಾಲ್ಗೊಳ್ಳುವುದರ ಮೂಲಕ ಆರೋಗ್ಯ ಕಾಪಾಡುವಂತ ಕೆಲಸ ಮಾಡಲು ಸಾರ್ವಜನಿಕರು ಕ್ರೀಡಾಸಕ್ತಿ ಬೆಳೆಸಿಕೊಂಡು ಇದರ ಸದುಪಯೋಗಪಡೆದುಕೊಳ್ಳಬೇಕು ಇಂತಹ ಸಂಸ್ಥೆ ಕೇಂದ್ರಗಳಿಗೆ ಪ್ರತಿಯೊಬ್ಬರ ಪ್ರೋತ್ಸಾಹ ಅಗತ್ಯವಾಗಿದೆ ಎಂದು ಕೊಪ್ಪಳ ನಗರಸಭೆಯ ಅಧ್ಯಕ್ಷರಾದ ಅಮ್ಜದ್ ಪಟೇಲ್ ಅಭಿಪ್ರಾಯ ಪಟ್ಟರು, ಸಮಾರಂಭದಲ್ಲಿ ಸೈಯದ್ ಫೌಂಡೇಶನ್ ಅಧ್ಯಕ್ಷ ಕೆಎಂ ಸಯ್ಯದ್, ಅಂಜುಮನ್ ಕಮಿಟಿ ಅಧ್ಯಕ್ಷ ಆಸಿಫ್ ಕರಕಿಹಳ್ಳಿ, ಕೊಪ್ಪಳ ನಗರಸಭೆಯ ಸದಸ್ಯ ಮುತ್ತುರಾಜ್ ಕುಷ್ಟಗಿ ಅಕ್ಬರ್ ಪಾಷಾ ಪಲ್ಟನ್, ಕರ್ನಾಟಕ ಮುಸ್ಲಿಂ ಯುನಿಟಿ ಜಿಲ್ಲಾಧ್ಯಕ್ಷ ಎಂಡಿ ಜಿಲಾನ್ ಕಿಲ್ಲೆದಾರ್ ಸೈಯದ್ ನಾಸಿರ್ ಹುಸೇನಿ ಸೇರಿದಂತೆ ಕಾರ್ಯಕರ್ತರು ಮತ್ತು ಅಭಿಮಾನಿಗಳು, ಪಾಲ್ಗೊಂಡಿದ್ದರು.

# ಅರ್ಜಿ ಆಹ್ವಾನ

**ಮಲ್ಲಮ್ಮ ನುಡಿ ವಾರ್ತೆ**

ಯಾದಗಿರಿ : ಸೆಪ್ಟೆಂಬರ್ 22 : 2025–26ನೇ ಸಾಲಿನ ಕರ್ನಾಟಕ ಪರಿಶಿಷ್ಟಜಾತಿ, ಪರಿಶಿಷ್ಟಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮದ ಭೂ ಒಡೆತನ ಯೋಜನೆಯಡಿ ಅರ್ಜಿ ಆಹ್ವಾನಿಸಲಾಗಿದೆ ಎಂದು ಯಾದಗಿರಿ ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕರು ಚನ್ನಬಸಪ್ಪ ಅವರು ತಿಳಿಸಿದ್ದಾರೆ.

ಕರ್ನಾಟಕ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮದ ಯೋಜನೆಯಾದ ಭೂ ಒಡೆತನ ಯೋಜನೆಯಡಿ ಪರಿಶಿಷ್ಟಜಾತಿ, ಪರಿಶಿಷ್ಟಪಂಗಡದ ಅಲೆಮಾರಿ ಸಮುದಾಯದ ಜನರಿಗೆ ಇತರೆ ಜಾತಿಯ ಹಿಂದುಳಿದ ವರ್ಗಗಳ ಭೂ ಮಾಲಿಕರಿಂದ ಭೂಮಿಯನ್ನು ನಿಗಮಕ್ಕೆ ಮಾರಾಟ ಮಾಡಲು 2025 ಸೆಪ್ಟೆಂಬರ್ 23 ರಿಂದ ಅಕ್ಟೋಬರ್ 7 ರಂದು ದಿನಗಳ ವರೆಗೆ ಅಗತ್ಯ ದಾಖಲೆಗಳೊಂದಿಗೆ ಅರ್ಜಿಸಲ್ಲಿಸಬೇಕು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕೌಶಲ್ಯ ಓಲಂಪಿಕ್ಸ್ ಸ್ಪರ್ಧಾ ಕಾರ್ಯಕ್ರಮಕ್ಕೆ ಹೆಸರು ನೋಂದಾಯಿಸಿಕೊಳ್ಳಲು ಕರೆ

**ಮಲ್ಲಮ್ಮ ನುಡಿ ವಾರ್ತೆ**

ಯಾದಗಿರಿ : ಸೆಪ್ಟೆಂಬರ್ 22–ಕೌಶಲ್ಯ ಓಲಂಪಿಕ್ಸ್ ಸ್ಪರ್ಧಾ ಕಾರ್ಯಕ್ರಮದಲ್ಲಿ ಹೆಸರು ನೋಂದಾಯಿಸಿಕೊಳ್ಳಲು ಆಹ್ವಾನಿಸಲಾಗಿದೆ ಎಂದು ಯಾದಗಿರಿ ಜಿಲ್ಲಾ ಕೌಶಲ್ಯ ಮಿಷನ್ ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿಗಳು ಹಾಗೂ ಅಪರ ಜಿಲ್ಲಾಧಿಕಾರಿ ಶ್ರೀ ರಮೇಶ ಕೋಲಾರ ಅವರು ತಿಳಿಸಿದ್ದಾರೆ.

ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮವು ಕೌಶಲ್ಯ ಹೊಂದಿರುವ ಅಭ್ಯರ್ಥಿಗಳಿಗೆ ಅತಿ ದೊಡ್ಡ ಜಾಗತಿಕ ವೇದಿಕೆಯಲ್ಲಿ ತಮ್ಮ ಕೌಶಲ್ಯವನ್ನು ಪ್ರದರ್ಶಿಸಲು ಸುವರ್ಣಾವಕಾಶ ಒದಗಿಸಿದೆ. ಹಾಗೂ ವಿಶ್ವಕೌಶಲ್ಯ ಸ್ಪರ್ಧೆಯಲ್ಲಿ ಪದಕಗಳನ್ನು ಗೆಲ್ಲುವುದರ ಮೂಲಕ ಭಾರತವನ್ನು ಪ್ರತಿನಿಧಿಸಲು ಅವಕಾಶ ನೀಡುತ್ತದೆ. ಈ ಕಾರ್ಯಕ್ರವು ವೃತ್ತಿಪರ ಕೌಶಲ್ಯ ಒಲಂಪಿಕ್ಸಳಿಗೆ ಸಮಾನವಾದ ಜಾಗತಿಕ ಮಟ್ಟದ ಸ್ಪರ್ಧೆಯಾಗಿರುತ್ತದೆ.

2026ನೇ ಸಾಲಿಗೆ ವಿಶ್ವ ಕೌಶಲ್ಯ ಸ್ಪರ್ಧೆಯು ಚೀನಾದ ಶಾಂಘೈನಲ್ಲಿ ನಡೆಯಲಿದೆ, ಕರ್ನಾಟಕ ರಾಜ್ಯದ ಯುವ ಜನತೆಯ ಜ್ಞಾನಾರ್ಜನೆಗೆ ಸೂಕ್ತ ವೇದಿಕೆ ಕಲ್ಪಿಸಲು ಹಾಗೂ ಮಾದರಿ ಕೌಶಲ್ಯ ಭರಿತ ರಾಜ್ಯವನ್ನಾಗಿಸಲು 2025–26ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಕೌಶಲ್ಯ ಒಲಂಪಿಕ್ಸ್ (india skills-karnataka-2025) ಸ್ಪರ್ಧಾ ಕಾರ್ಯಕ್ರಮವನ್ನು ಜಿಲ್ಲಾ ವಲಯ ಹಾಗೂ ರಾಜ್ಯಮಟ್ಟಗಳಲ್ಲಿ ಕೈಗೊಳ್ಳಲು ಯೋಜಿಸಲಾಗಿದೆ. ಈ ಸ್ಪರ್ಧೆಯಲ್ಲಿ ಆಯ್ಕೆಯಾದ ಯುವ ಜನತೆಗೆ ಕೌಶಲ್ಯವನ್ನು ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟದ ವಿಶ್ವಕೌಶಲ್ಯ ಸ್ಪರ್ಧೆಗಳಲ್ಲಿ ಪ್ರತಿನಿಧಿಸುವಂತೆ ಪ್ರೇರೆಪಿಸುವ ನಿಟ್ಟಿನಲ್ಲಿ ದಕ್ಷಿಣ ಪ್ರಾದೇಶಿಕ ಹಂತಕ್ಕೆ ಸೂಕ್ತ ಅಭ್ಯರ್ಥಿಗಳನ್ನು ಗುರುತಿಸುವ ಪೂರ್ವಸಿದ್ಧತೆ ಕೈಗೊಳ್ಳಬೇಕಾಗಿರುತ್ತದೆ.

ರಾಜ್ಯ ಕೌಶಲ್ಯ ಓಲಂಪಿಕ್ಸ್ ಸ್ಪರ್ಧಾ ಕಾರ್ಯಕ್ರಮದಲ್ಲಿ ಯಾದಗಿರಿ ಜಿಲ್ಲೆಯಿಂದ ಹೆಚ್ಚಿನ ಯುವಜನತೆ ಭಾಗವಹಿಸಿ ಕೌಶಲ್ಯಯುತ ಸೌಲಭ್ಯಗಳನ್ನು ಪಡೆಯಲು ಸಾಕಷ್ಟು ಅವಕಾಶಗಳಿವೆ. ಈ ಸ್ಪರ್ಧಾ ಕಾರ್ಯಕ್ರಮದಲ್ಲಿ ಭಾಗವಹಿಸಲು ಅರ್ಹತಾ ಮಾನದಂಡಗಳು ಮತ್ತು ಹೆಸರು ನೋಂದಾಯಿಸಿಕೊಳ್ಳಬೇಕು ವೆಬ್‌ಸೈಟ್ ತಿತಿತಿ.ಇುಟಟುಟಿ–ಜುಚಿಜುರುಣಚಿಟ.ರಠತ.ಎಟಿ ನಲ್ಲಿ ಬಳಸಿಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ ದೂ.ಸಂ.9844277471, 9880072695 ಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಮೀಕ್ಷೆಯಲ್ಲಿ ಜಾತಿ ಈಡಿಗ ಎಂದು ಬರೆಯಿಸಿ

**ಮಲ್ಲಮ್ಮ ನುಡಿ ವಾರ್ತೆ**



ಲಿಂಗಸೂಗೂರು ಸೆ:– ಕರ್ನಾಟಕ ರಾಜ್ಯ ಸರ್ಕಾರವು ಜಾತಿ, ಶ್ರೇಕ್ಷಣಿಕ ಹಾಗೂ ಆರ್ಥಿಕ ಸಮಿಕ್ಷೇಯಲ್ಲಿ ಜಾತಿ ಕಾಲಂ ನಲ್ಲಿ ಈಡಿಗ ಎಂದು ಬರೆಯಿಸಿ ಎಂದು ಲಿಂಗಸೂಗೂರು ತಾಲೂಕು ಆರ್ಯ ಈಡಿಗ ಸಂಘದ ಅಧ್ಯಕ್ಷ ವೆಂಕಟೇಶಪ್ಪ ಗುತ್ತೇದಾರ ಮನವಿ ಮಾಡಿದ್ದಾರೆ.

ದಿನಾಂಕ :22–09–2025 ರಿಂದ ಮನೆಯ ಬಾಗಿಲಗೆ ಸಮಿಕ್ಷಣಾದಾರರು ಬಂದಗ 60 ಪ್ರಶ್ನಾವಳಿಯ ಡಿಜಿಟೆಲ್ ಸಮಿಕ್ಷೆ ಇದ್ದು. ಅದರಲ್ಲಿ ಕೆಳಗಿನ ಕಾಲಂನಲ್ಲಿ ಇರುವಂತೆ ಉತ್ತರಸಿರಿ ಮನೆಯ ಪ್ರತಿ ಸದಸ್ಯರು ಆದರ ಕಾಡ9 ಲಿಂಕ್ ಹೊಂದಿದ ಪೋನ್ ನಂಬರನ್ನು ಚಾಲ್ತಿಯಲ್ಲಿ ಇರಿಸಿ. ಸಮಿಕ್ಷೆ ಸಮಯದಲ್ಲಿ ಆಧಾರ ಲಿಂಕ್ ಪೋನ್ ಸಂಖ್ಯೆಗೆ OTP ಬರತ್ತದೆ ಆ ಸಂಖ್ಯೆಯನ್ನು ಸಮೀಕ್ಷಣಾಕಾರರಗೆ ತಿಳಿಸಬೇಕು ಮತ್ತು ಕಾಲ0 ನಂ 8 ರಲ್ಲಿ ಧರ್ಮದ ಕಾಲಂ ನಲ್ಲಿ "ಹಿಂದು " ಕಾಲಂ 9 ರಲ್ಲಿ ಜಾತಿ – "ಈಡಿಗ" ಕಾಲಂ 10 ರಲ್ಲಿ ಉಪ ಜಾತಿ – "ಇಳಿಗ / ಇಳಿಗೇರ್ " ಎಂದು ನಿಮ್ಮ ಉಪಜಾತಿಯನ್ನು ನಮೂದಿಸಿ ಸರಿಯಾದ ಮಾಹಿತಿಯನ್ನು ನಿಡಿ ಮುಂದಿನ ಮಕ್ಕಳ ಭವಿಷ್ಯಕ್ಕೆ ಕೈ ಜೋಡಿಸಬೇಕಾಗಿ ತಾಲೂಕ ಈಡಿಗ ಸಂಘದ ಅಧ್ಯಕ್ಷ ವೆಂಕಟೇಶಪ್ಪ ಗುತ್ತೇದಾರ, ಉಪಾಧ್ಯಕ್ಷ ರಾಮಯ್ಯ ಗುತ್ತೇದಾರ, ಕಾರ್ಯದರ್ಶಿ ಬಸವರಾಜ ಗುತ್ತೇದಾರ, ಸಹ ಕಾರ್ಯದರ್ಶಿ ಶಿವಯ್ಯ ಗುತ್ತೇದಾರ ಹೊನ್ನಳ್ಳಿ, ಗದಯ್ಯ ಗುತ್ತೇದಾರ ಪತ್ರಿಕಾ ಪ್ರಕಟಣೆ ಮೂಲಕ ಕೋರಿದ್ದಾರೆ.

# ಸೋಮವಂಶ ಆರ್ಯ ಕ್ಷತ್ರಿಯ ಸಮಾಜದಿಂದ ಭವಾನಿ ದೇವಿ ಪ್ರತಿಷ್ಠಾಪನೆ

**ಮಲ್ಲಮ್ಮ ನುಡಿ ವಾರ್ತೆ**



ಲಿಂಗಸುಗೂರು, ಸೆ.21: ದಸರಾ ಹಬ್ಬದ ಪ್ರಯುಕ್ತ ಪಟ್ಟಣದಲ್ಲಿ ಭಕ್ತಿ, ಭಾವನೆ ಹಾಗೂ ಸಂಭ್ರಮದ ವಾತಾವರಣ ನಿರ್ಮಾಣವಾಯಿತು. ಮಹಾಲಯಾ ಅಮಾವಾಸ್ಯೆಯಂದು ಪಟ್ಟಣದ ಬಸವಸಾಗರ ಕ್ರಾಸ್ ಹತ್ತಿರ ಇರುವ ತುಳಜಾ ಭವಾನಿ ದೇವಾಲಯದಲ್ಲಿ ಸೋಮವಂಶ ಆರ್ಯ ಕ್ಷತ್ರಿಯ ಸಮಾಜದವರು ನಾಡದೇವತೆ ಭವಾನಿ ಮೂರ್ತಿಯನ್ನು ವೈದಿಕ ಮಂತ್ರೋಚ್ಚಾರಣೆ ನಡುವೆ ಭಕ್ತಿಭಾವದಿಂದ ಪ್ರತಿಷ್ಠಾಪನೆ ಮಾಡಿದರು. ಬೆಳಗಿನ ಜಾವವೇ ಭಕ್ತರ ಓಡಾಟದಿಂದ ದೇವಸ್ಥಾನ ಸುತ್ತಮುತ್ತ ಪ್ರದೇಶವೇ ಮೆರಗು ತಳೆದಿತ್ತು. ಸಮಾಜದ ಹಿರಿಯರು, ಮಹಿಳೆಯರು, ಯುವಕರು ಹಾಗೂ ಮಕ್ಕಳು ಹೊಸ ಉಡುಪು ತೊಟ್ಟು ಧಾರ್ಮಿಕ ಹಬ್ಬದ ಸಂಭ್ರಮದಲ್ಲಿ ಪಾಲ್ಗೊಂಡರು. ಭವಾನಿ ದೇವಿಯ ಮೂರ್ತಿಗೆ ವಿಶೇಷ ಅಲಂಕಾರ ಮಾಡಿ ಪೂಜೆ ಸಲ್ಲಿಸಲಾಯಿತು. ಭಕ್ತರು ತಾವು ತಂದ ಹಾರ, ತಂಬಿಟ್ಟು, ತೆಂಗಿನಕಾಯಿ ಅರ್ಪಿಸಿ ಭಕ್ತಿಭಾವ ತೋರಿದರು.

ಸಮಾಜದ ಹಿರಿಯ ಮುಖಂಡ ಕಿಶನರಾವು ಚವ್ಹಾಣ ಮಾತನಾಡಿ – "ನಾಡದೇವತೆ ಭವಾನಿ ದೇವಿಯ ಪ್ರತಿಷ್ಠಾಪನೆಯು ನಮ್ಮ ಸಮುದಾಯ ಮಾತ್ರವಲ್ಲದೆ, ಇಡೀ ಪಟ್ಟಣದ ಜನತೆಗೆ ಒಗ್ಗಟ್ಟಿನ ಸಂಕೇತವಾಗಿದೆ. ದಸರಾ ಹಬ್ಬವು ಸತ್ಯದ ಜಯ, ಧರ್ಮದ ಗೆಲುವನ್ನು ಪ್ರತಿಪಾದಿಸುವ ಹಬ್ಬ. ಎಲ್ಲರೂ ಸೇರಿ ಸಮಾಜದಲ್ಲಿ ಶಾಂತಿ, ಭ್ರಾತೃತ್ವ ಬೆಳೆಸಿಕೊಳ್ಳಬೇಕು" ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಸಮಾಜದ ಗಣ್ಯರಾದ ಅಧ್ಯಕ್ಷ ದಶರಥರಾವು ಮಿರಜಕರ, ಉಪಾಧ್ಯಕ್ಷ ಶ್ರೀನಿವಾಸ ಬುಸಾರೆ, ಖಜಾಂಚಿ ದೇವರಾಜ ಛತ್ರಭಂದ, ಕಾರ್ಯದರ್ಶಿ ಆನಂದರಾವು ಚವ್ಹಾಣ, ಸಹಕಾರ್ಯದರ್ಶಿ ನಾರಾಯಣರಾವು ಬುಸಾರೆ, ಶಾಮ ಚವ್ಹಾಣ, ರಾಘವೇಂದ್ರ ಚವ್ಹಾಣ, ಅಶೋಕ ಚವ್ಹಾಣ, ತುಕಾರಾಮ, ಸುಭಾಸ ಬುಸಾರೆ, ಹನುಮಂತರಾವು ಮಿರಜ–ಕರ, ರಾಜಶೇಖರ, ರಾಜೇಶ್, ಮಧುಸೂದನ, ವೆಂಕಟೇಶ್, ರಂಗನಾಥ, ಶಂಕರ, ವಿಠಲ, ರಾಹುಲ್, ವಿನಯ, ವಿಕಾಸ, ವಿಜಯ, ಮಂಜುನಾಥ, ಅಂಬಾಜಿ ಹಾಗೂ ಸಮಾಜದ ಮಹಿಳೆಯರಲ್ಲಿ ಉಮಾಬಾಯಿ, ಸುಂದರಬಾಯಿ, ರತ್ನಭಾಯಿ, ರಾಜೇಶ್ವರಿ, ಜಯಶ್ರೀ, ಸಹನಾ, ಶಿಲ್ಪಾ, ಸ್ವಪ್ನ, ನಂದಿನಿ, ಸೌಮ್ಯ ಸೇರಿದಂತೆ ಅನೇಕರ ಉಪಸ್ಥಿತಿ ಗಮನಾರ್ಹವಾಗಿತ್ತು.

ಅರ್ಚಕರಾದ ತಿರುಮಲರಾವು ಹಾಗೂ ಕೃಷ್ಣವೈದಿಕ ಮಂತ್ರೋಚ್ಚಾರಣೆ ನೆರವೇರಿಸಿದರು. ಭಕ್ತಾದಿಗಳ ಭಾರಿ ಭಾಗವಹಿಸುವಿಕೆಯಿಂದ ಹಬ್ಬದ ಸಂಭ್ರಮ ಇನ್ನಷ್ಟು ವಿಸ್ತಾರಗೊಂಡಿತು.

## ಸಮೀಕ್ಷೆಗೆ ಚಾಲನೆ ನೀಡಿದ ಶಾಸಕ ಕಂದಕೂರು.

# ಗ್ರಾಮೀಣ ಭಾಗದಲ್ಲಿ ಸಂಯಮದಿಂದ ಸಮೀಕ್ಷೆ ನಡೆಸಲು ಕರೆ



**ಮಲ್ಲಮ್ಮ ನುಡಿ ವಾರ್ತೆ**

ಗುರುಮಠಕಲ್: ಸೆ. 22 ಸಮೀಕ್ಷೆ ವೇಳೆ ತಾಲೂಕಿನ ಗ್ರಾಮೀಣ ಭಾಗದಲ್ಲಿ ಕೇಳಲಾಗುವ ಪ್ರಶ್ನೆಗಳು ಮತ್ತು ದಾಖಲೆಗಳಿಗೆ ಸಂಬಂಧಿಸಿದಂತೆ ಜನರಲ್ಲಿ ಗೊಂದಲ ಮತ್ತು ಗಾಬರಿ ಮೂಡುವ ಸಾಧ್ಯತೆ ಇದ್ದು, ಸಮೀಕ್ಷೆಗೆ ತೆರಳುವ ಗಣತಿ–ದಾರರು ಸಂಯಮದಿಂದ ಸಮೀಕ್ಷೆ ಮಾಡಲು ಶಾಸಕ ಶರಣಗೌಡ ಕಂದಕೂರು ಸಲಹೆ ನೀಡಿದರು.

ಪಟ್ಟಣದ ತಹಶೀಲ್ದಾರ್ ಕಚೇರಿಯಲ್ಲಿ ಸಾಂಕೇತಿಕವಾಗಿ ಕೆಲವು ಶಿಕ್ಷಕರಿಗೆ ಗಣತಿ ಕಿಟ್ ನೀಡಿ ಮಾತನಾಡಿದ ಶಾಸಕ ಶರಣಗೌಡ ಕಂದಕೂರು

ತಾಲೂಕಿನ 258 ಪ್ರಾಥಮಿಕ ಶಿಕ್ಷಕರು ಮತ್ತು 13 ಜನ ಮೇಲ್ವಿಚಾರಕರನ್ನು ಸಮೀಕ್ಷೆಗೆ ನಿಯೋಜಿಸಿದ್ದು, ತಾಲೂಕಿನ ತಹಶೀಲ್ದಾರ್ ರು ಎಲ್ಲಾ ಮೇಲ್ವಿಚಾರಕರಿಗೆ ಮಾರ್ಗದರ್ಶನ ನೀಡಲಿದ್ದಾರೆ. ಸೆಪ್ಟೆಂಬರ್ 22 ರಿಂದ ಅಕ್ಟೋಬರ್ 7ರ ವರೆಗೆ ರಾಜ್ಯಾದ್ಯಂತ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಈ ಸಮೀಕ್ಷೆಯನ್ನು ನಡೆಸಲಿದ್ದು, ಇದಕ್ಕೆ ರಾಜ್ಯ ಸರಕಾರ ಅಧಿಕೃತವಾಗಿ ಅನುಮೋದನೆ ನೀಡಿದೆ ಸಾರ್ವಜನಿಕರು ಸಮೀಕ್ಷೆಗೆ ಸಹಕಾರ ನೀಡಲು ಮನವಿ ಮಾಡಿದರು.

ಪಟ್ಟಣ ಹಾಗೂ ಗ್ರಾಮೀಣ ಭಾಗದಲ್ಲಿ ಮನೆ ಮನೆಗೂ ತೆರಳಿ ಅವರಲ್ಲಿ ಸರಿಯಾದ ಮಾಹಿತಿ ಪಡೆಯಲು, ಹಾಗೂ ನೀಡಿರುವ ಮಾಹಿತಿಯಿಂದ ಯಾವುದೇ ಶೈಕ್ಷಣಿಕ, ಉದ್ಯೋಗ ಅವಕಾಶಗಳು ನೀವು ವಂಚಿತರಾಗುವದಿಲ್ಲ ಈ ಹಿಂದೆಯೂ ಸಮೀಕ್ಷೆ ನಡೆದಿವೆ ಮುಂದೆ ಕೇಂದ್ರ ಸರಕಾರದಿಂದಲೂ ಸಮೀಕ್ಷೆಗಳು ನಡೆಯಬಹುದು. ಕಾಲ ಕಾಲಕ್ಕೆ ತಕ್ಕಂತೆ ಸರಕಾರಗಳು ಸಮೀಕ್ಷೆ ನಡೆಸುವದು ಸಾಮಾನ್ಯ ನ್ಯಾಯಾಲಯವು ಸಮೀಕ್ಷೆಗೆ ನಿರ್ದೇಶನ ನೀಡಿದ ಹಿನ್ನಲೆ ಸಮೀಕ್ಷೆ ಜರುಗುತ್ತಿದ್ದು ಜನ ಭಯ ಪಡುವ ಅವಶ್ಯಕತೆ ಇಲ್ಲ, ಹಿಂದುಳಿದ ವರ್ಗಗಳ ಆಯೋಗದ ಸಮೀಕ್ಷೆಗೆ ಸ್ಪಷ್ಟ ಮಾಹಿತಿ ನೀಡಿ ಯಶಸ್ವಿಗೊಳಿಸಲು ಕರೆ ನೀಡಿದರು.

ಈ ಸಂದರ್ಭದಲ್ಲಿ ತಹಶೀಲ್ದಾರ್ ಶಾಂತಗೌಡ ಬಿರಾದಾರ, ಗ್ರೇಡ್ 2 ತಹಶೀಲ್ದಾರ್ ನರಸಿಂಹ ಸ್ವಾಮಿ, ಶಿಕ್ಷಣ ಇಲಾಖೆಯ ರವೀಂದ್ರ ಚೌಹಣ್, ಬಾಲಪ್ಪ ಸಿರಿಗೆಂ, ಸಮೀಕ್ಷೆಗೆ ನಿಯೋಜನೆಗೊಂಡ ಶಿಕ್ಷಕರು ಪಾಲ್ಗೊಂಡಿದ್ದರು.

# ಪ್ರಸಕ್ತ ವರ್ಷದಲ್ಲಿ ಶೆ.92ರಷ್ಟು ವಸೂಲಾತಿ : ಬಳಿಚಕ್ರ

**ಮಲ್ಲಮ್ಮ ನುಡಿ ವಾರ್ತೆ**



ಯಾದಗಿರಿ : ಇಲ್ಲಿನ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ನಿಂದ ರೈತರ ಕೃಷಿ ಚಟುವಟಿಕೆಗಳಿಗೆ ನೀಡಿದ ಸಾಲದಲ್ಲಿ ಶೇ.92ರಷ್ಟು ಸಿಬ್ಬಂದಿಗಳ ಸಹಕಾರದಿಂದ ವಸೂಲಾತಿ ಮಾಡಲಾಗಿದೆ ಎಂದು ಬ್ಯಾಂಕ್‌ನ ಅಧ್ಯಕ್ಷ ರಾಮಣ್ಣ ಬಳಿಚಕ್ರ ಕೋಟಗೇರಾ ಹೇಳಿದರು.

ಶನಿವಾರ ನಗರದ ಬ್ಯಾಂಕ್ ಆವರಣದಲ್ಲಿ ನಡೆದ ಬ್ಯಾಂಕ್‌ನ 2024–25ನೇ ಸಾಲಿನ 67ನೇ ವಾರ್ಷಿಕ ಮಹಾಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿ, ಜಿಲ್ಲೆಯಲ್ಲಿಯೇ ನಮ್ಮ ಬ್ಯಾಂಕ್ ಸಾಲ ವಸೂಲಾತಿಯಲ್ಲಿ ಪ್ರಥಮ ಸ್ಥಾನದಲ್ಲಿರುವ ಮೂಲಕ ರಾಜ್ಯದ ಗಮನ ಸೆಳೆದಿದೆ ಎಂದರು.

ಇಲ್ಲಿಯವರೆಗೆ ಬ್ಯಾಂಕ್ ಒಟ್ಟು 10063 ಸದಸ್ಯರನ್ನು ಒಳಗೊಂಡಿದ್ದು, ಇವರಲ್ಲಿ 5271 ಸಾಲಗಾರ ಸದಸ್ಯರಾಗಿದ್ದಾರೆ, ಈ ವರ್ಷ ಬ್ಯಾಂಕ್‌ನಿಂದ 1.78 ಕೋಟಿ ರೂ. ಸಾಲ ವಿತರಿಸಲಾಗಿದೆ, ನಮ್ಮ ಬ್ಯಾಂಕ್‌ನಲ್ಲಿ ಪಿಗ್ಮಿ ಠೇವಣಿಯ ಸಂಗ್ರಹವು ಉತ್ತಮವಾಗಿದ್ದು, ರಾಜ್ಯ ಬ್ಯಾಂಕ್‌ನಲ್ಲಿ 2.48 ಕೋಟಿ ರೂ. ನಿಶ್ಚಿತ ಠೇವಣಿ ಹಣವಿದೆ ಎಂದು ತಿಳಿಸಿದರು.

ಬ್ಯಾಂಕ್‌ನಿಂದ ರೈತರಿಗೆ ಶೇ.3 ರ ಬಡ್ಡಿ ದರದಲ್ಲಿ ವಿವಿಧ ಯೋಜನೆಗಳಲ್ಲಿ ಸಾಲ ಹಂಚುವ ಯೋಜನೆ ರೂಪಿಸಲಾಗಿದೆ, ಇದಕ್ಕಾಗಿ ವಿಶೇಷ ಯೋಜನೆ ಭೂ ಅಭಿವೃದ್ಧಿ ತಂತಿ ಬೇಲಿ, ಭೂ ಅಭಿವೃದ್ಧಿಗಾಗಿ ಟ್ರಾಕ್ಟರ್, ಪವರ್ ಟೆಲ್ಲರ್ ಖರೀಧಿಗೆ ಸಾಲದ ಸೌಲಭ್ಯವಿರುತ್ತದೆ ಎಂದು ಮಾಹಿತಿ ನೀಡಿದರು.

ಸಭೆಯಲ್ಲಿ ಜಿಲ್ಲಾ ವ್ಯವಸ್ಥಾಪಕರಾದ ಅಜಯ ಮಾಲಿ ಪಾಟೀಲ್ ಮಾತನಾಡಿ, ಸದರಿ ಸಾಲಿನಲ್ಲಿ ಯಾದಗಿರಿ ಬ್ಯಾಂಕ್‌ಗೆ 1.15 ಕೋಟಿ ರೂ. ಹೊಸ ಸಾಲವನ್ನು ನೀಡಲು ಆರ್ಥಿಕ ಹಂಚಿಕೆಯನ್ನು ನೀಡಲಾಗಿದೆ, ಕಾರಣ ಸಾಲ ಪಡೆದ ರೈತರು ಸಕಾಲಕ್ಕೆ ಮರು ಪಾವತಿಸಬೇಕು, ಅಂದಾಗ ಮಾತ್ರ ಇನ್ನೂಳಿದ ರೈತರಿಗೆ ಸಾಲ ನೀಡಲು ಅನೂಕೂಲ ಮಾಡಬೇಕೆಂದು ಮನವಿ ಮಾಡಿದರು.

ಬ್ಯಾಂಕ್‌ನ ನಿರ್ದೇಶಕರಾದ ಬಸರಡ್ಡಿ ಹೆಗ್ಗಣಗೇರಾ, ವಾರ್ಷಿಕ ಮಹಾಸಭೆಯ ವರಧಿಯನ್ನು ವಾಚಿಸಿದರು.

ಬ್ಯಾಂಕ್‌ನ ವ್ಯವಸ್ಥಾಪಕರಾದ ಅಯನರಡ್ಡಿ ನಾಯ್ಕಲ್, ಬ್ಯಾಂಕ್‌ನ ಲಾಭ–ಹಾನಿ, ಅಡವಿ ಪತ್ರ, ಮುಂಗಡ ಅಂದಾಜು ಪತ್ರದ ವಿವರಗಳನ್ನು ನೀಡಿದರು.

ವೇದಿಕೆ ಮೇಲೆ ಉಪಾಧ್ಯಕ್ಷ ನಾಗರಡ್ಡಿ ಹೆಡಗಿಮದ್ರಾ, ನಿರ್ದೇಶಕರಾದ ಆರ್. ಮಹಾದೇವಪ್ಪಗೌಡ ಅಬ್ಬೆತುಮಕೂರ, ಶರಣಪ್ಪಗೌಡ ಮಾಲಿ ಪಾಟೀಲ್ ಕೌಳೂರ, ಅಮೃತರಡ್ಡಿ ಪಾಟೀಲ್ ಹತ್ತಿಕುಣಿ, ಬಸರಡ್ಡಿ ಹೆಗ್ಗಣಗೇರಾ, ರಾಘವೇಂದ್ರರಡ್ಡಿ ಕೊಂಕಲ್, ಶರಣಗೌಡ ಸೌರಾಷ್ಟ್ರಹಳ್ಳಿ, ಬಸರಾಜಪ್ಪ ಕಣೇಕಲ್, ವೆಂಕಟರಾಮುಲು ಚಪೇಟ್ಲಾ, ಬನ್ನಪ್ಪ ಹಳಿಗೇರಾ, ರಾಮಚಂದ್ರಪ್ಪ ಮುಂಡರಗಿ, ಮರೆಮ್ಮ ಮುಂಡರಗಿ ಸೇರಿದಂತೆ ಇತರರು ಇದ್ದರು.

# ರೈತರ ಆರ್ಥಿಕ ಬದಲಾವಣೆಯಲ್ಲಿ ಸಂಘಗಳ ಪಾತ್ರ ಮುಖ್ಯ: ಮಾಲಿ ಪಾಟೀಲ್

**ಮಲ್ಲಮ್ಮ ನುಡಿ ವಾರ್ತೆ**




ಯಾದಗಿರಿ: ಸಹಕಾರ ಇಲಾಖೆಯಿಂದ ಗ್ರಾಮೀಣ ಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಕೃಷಿ ಪತ್ತಿನ ಸಹಕಾರ ಸಂಘಗಳ ರೈತರಿಗೆ ಶೂನ್ಯ ಬಡ್ಡಿ ದರದಲ್ಲಿ 3 ಲಕ್ಷ ರೂ. ವರೆಗೆ ಸಾಲ ನೀಡುವ ಮೂಲಕ ಕೃಷಿ ಕ್ಷೇತ್ರ ಬೆಳವಣಿಗೆ ಹಾಗೂ ರೈತರ ಆರ್ಥಿಕ ಪರಿಸ್ಥಿತಿ ಬದಲಾವಣೆಯಲ್ಲಿ ಪ್ರಮುಖ ಪಾತ್ರವಹಿಸಿವೆ ಎಂದು ಹತ್ತಿಕುಣಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತದ ಅಧ್ಯಕ್ಷ ಶರಣಪ್ಪಗೌಡ ಮಾಲಿ ಪಾಟೀಲ್ ಹೇಳಿದರು.

ರವಿವಾರ ತಾಲೂಕಿನ ಹತ್ತಿಕುಣಿ ಗ್ರಾಮದ ಸಂಘದ ಆವರಣದಲ್ಲಿ ಹಮ್ಮಕೊಂಡಿದ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ನಮ್ಮ ಸಂಘ ಪ್ರಸಕ್ತ ಸಾಲಿನಲ್ಲಿ ರೈತರಿಗೆ 2.24 ಕೋಟಿ ರೂ. ಬೆಳೆ ಸಾಲ ಮತ್ತು ಸಣ್ಣ ಪುಟ್ಟ ವ್ಯಾಪಾರಸ್ಥರಿಗೆ 2.14 ಕೋಟಿ ರೂ, ಸ್ವಸಹಾಯ ಸಂಘಗಳಿಗೆ 32 ಲಕ್ಷ ರೂಪಾಯಿ ಸಾಲ ವಿತರಿಸಲಾಗಿದೆ. ಅದರಂತೆ ರೈತರು ಸಂಘದಲ್ಲಿ 9 ಲಕ್ಷ ರೂ. ಠೇವಣಿ ಹಣ ಇಟ್ಟಿದ್ದಾರೆ ಎಂದು ಮಾಹಿತಿ ನೀಡಿದರು.

ನಮ್ಮ ಆಡಳಿತ ಮಂಡಳಿ ನಿರ್ದೇಶಕರು ಹಾಗೂ ಸಿಬ್ಬಂದಿಗಳ ಪ್ರಮಾಣಿಕ ಪ್ರಯತ್ನದಿಂದ ಶೇ.100% ಸಾಲ ವಸೂಲಾತಿ ಮಾಡುವ ಮೂಲಕ ಸಂಘಕ್ಕೆ 9 ಲಕ್ಷ ರೂ ಲಾಭ ಬಂದಿದೆ ಎಂದು ತಿಳಿಸಿದರು.

ಈ ವರ್ಷ ರೈತರು ಮುಂಗಾರು ಬಿತ್ತನೆ ಸಮಯದಲ್ಲಿ ರಸಗೊಬ್ಬರ ಖರೀದಿಸಲು ಪರದಾಡಿದ ಸ್ಥಿತಿ ಗಮನಿಸಿದ್ದೇವೆ. ನಮ್ಮ ಸಿಬ್ಬಂದಿ ಈಗಾಗಲೇ ಕೃಷಿ ಮಹಾ ವಿದ್ಯಾಲಯ ಭೀಮರಾಯನ ಗುಡಿಯಲ್ಲಿ ತರಬೇತಿ ಪಡೆದು ಬಂದಿದ್ದಾರೆ. ಸರ್ಕಾರ ಅನುಮತಿ ನೀಡಿದರೆ ಮುಂದಿನ ವರ್ಷ ಸಂಘದಿಂದಲೇ ರಸಗೊಬ್ಬರ ಪೂರೈಕೆಗೆ ಯತ್ನಿಸುತ್ತೇವೆ ಎಂದು ತಿಳಿಸಿದರು.

ಈ ಭಾಗದಲ್ಲಿ ನೀರಾವರಿ ಸೌಕರ್ಯ ಇರುವುದರಿಂದ ರೈತರು ಹೆಚ್ಚಿನ ಸಂಖ್ಯೆಯಲ್ಲಿ ರೈತರು ಭತ್ತ, ತೊಗರಿ, ಸಜ್ಜಿ ಇನ್ನಿತರ ಬೆಳೆಗಳನ್ನು ಬೆಳೆಯುತ್ತಾರೆ. ಸರ್ಕಾರದ ಬೆಂಬಲ ಯೋಜನೆ ಅಡಿಯಲ್ಲಿ ಧಾನ್ಯಗಳನ್ನು ಖರೀದಿಸುವ ಕೇಂದ್ರ ನಮ್ಮ ಸಂಘಕ್ಕೆ ನೀಡಲು ಜಿಲ್ಲಾಡಳಿತಕ್ಕೆ ಮನವಿ ಮಾಡಲಾಗಿದೆ ಎಂದು ಹೇಳಿದರು.

ರೈತರು ಕೃಷಿ ಜೋತೆಗ ಉಪಕಸುಬುಗಳಾದ ಹೈನುಗಾರಿಕೆ, ಕುರಿ–ಮೇಕೆ, ಸಾಕಾಣಿಕೆ ಮಾಡಬೇಕು ಇದು ಕೂಡ ಕುಟುಂಬಗಳಿಗೆ ಆರ್ಥಿಕ ಬಲ ತುಂಬುತ್ತದೆ ಅಭಿಪ್ರಾಯ ಪಟ್ಟರು.

ಕಾರ್ಯಕ್ರಮವನ್ನು ಸಂಘದ ಮಾಜಿ ಅಧ್ಯಕ್ಷ ಮಹಿಪಾಲರೆಡ್ಡಿ ಪಾಟೀಲ್ ಉದ್ಘಾಟಿಸಿ ಮಾತನಾಡಿ, ಹಲವಾರು ವರ್ಷಗಳಿಂದ ನಮ್ಮ ಸಂಘವು ಕ್ರೀಯಾಶೀಲವಾಗಿ ಕೆಲಸ ಮಾಡಿಕೊಂಡು ಬರುವ ಮೂಲಕ ಉತ್ತಮ ಆರ್ಥಿಕ ವ್ಯವಹಾರ ಮಾಡಿ ಜಿಲ್ಲೆಯಲ್ಲಿಯೇ ಅತ್ಯುತ್ತಮ ಸಂಘವೆಂಬ ಪಾತ್ರವಾಗಿದೆ ಎಂದು ಸಂಘದ ಚಟುವಟಿಕೆಗಳನ್ನು ಶ್ಲಾಘೀಸಿದರು.

ಬರುವ ದಿನಗಳಲ್ಲಿ ಕೆವೈಡಿಸಿಸಿ ಬ್ಯಾಂಕ್ ನೆರವಿನಿಂದ ಇನ್ನೂ ಹೆಚ್ಚಿನ ಈ ಭಾಗದ ರೈತರಿಗೆ ಬೆಳೆ ಸಾಲ ವಿತರಿಸಲು ಆಧ್ಯತೆ ನೀಡುತ್ತೇವೆ ಎಂದರು.

ಸಂಘದ ನಿರ್ದೇಶಕ ವೀರಭದ್ರಪ್ಪ ಯಡ್ಡಳ್ಳಿ ಮಾತನಾಡಿ, ಗ್ರಾಮೀಣ ಭಾಗದಲ್ಲಿರುವ ಸ್ವಸಹಾಯ ಸಂಘಗಳ ಮಹಿಳೆಯರು ತಮ್ಮ ಉಳಿತಾಯದ ಹಣವನ್ನು ಸಂಘದಲ್ಲಿ ವಹಿವಾಟು ಮಾಡುವ ಮೂಲಕ ಪ್ರಗತಿ ಸಾಧಿಸಬೇಕು. ಜೊತೆಗೆ ಸರ್ಕಾರದ ವಿವಿಧ ಇಲಾಖೆಗಳ ಯೋಜನೆಗಳ ಲಾಭ ಪಡೆಯಬೇಕು ಎಂದು ಸಲಹೆ ನೀಡಿದರು.

ಸಂಘದ ಮುಖ್ಯಕಾರ್ಯನಿರ್ವಾಹ ಅಧಿಕಾರಿ ಸಂಜೀವಕುಮಾರ ಪುಟಗಿ ಮಾತನಾಡಿ, ವಾರ್ಷಿಕ ಮಹಾಸಭೆಯ ವರದಿ ವಾಚಿಸಿ ಸಂಘದ ಚಟುವಟಿಕೆಗಳನ್ನು ವಿವರಿಸಿದರು.

ವೇದಿಕೆ ಮೇಲೆ ಸಂಘದ ಉಪಾಧ್ಯಕ್ಷ ಮಲ್ಲಿಕಾರ್ಜುನ ಖಂಡಪ್ಪನೋರ್, ನಿರ್ದೇಶಕರಾದ ಬೋಜಣ್ಣಗೌಡ ಯಡ್ಡಳ್ಳಿ, ಬಸವರಾಜ ಕೋಡ್ಲಾ, ಸಾಬರೆಡ್ಡಿ ತಮ್ಮಣೋರ್, ನರಸಪ್ಪ ಇದ್ಲಿ, ಸಾಬಣ್ಣ ಬೋಳೆರ್, ನರಸಪ್ಪ ಭೀಮನಳ್ಳಿ, ಯಲ್ಲಮ್ಮ ತಮ್ಮಣೋರ್, ಭೀಮವ್ವ ಸಮಣಾಪೂರ್, ಭೀಮರಡ್ಡಿ ರಾಂಪೂರಳ್ಳಿ, ಅಮೀನರೆಡ್ಡಿ ಬಿಳ್ಹಾರ್, ಶರಣಪ್ಪ ಶಂಕ್ರಪ್ಪನೋರ್, ದೇವಿಂದ್ರಪ್ಪಗೌಡ ಮಾಲಿ ಪಾಟೀಲ್, ಚಂದ್ರಾರೆಡ್ಡಿ ಬಂದಳ್ಳಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಸಾಬಣ್ಣ ಯಾದಗಿರಿ ಸ್ವಾಗತಿಸಿದರೆ. ಅಲ್ಲಾಬಕಾಸ್ ವಂದಿಸಿದರು. ಸಮಾರಂಭದಲ್ಲಿ ನೂರಾರು ರೈತರು ಮಹಿಳೆಯರು ಭಾಗವಹಿಸಿದರು.

# ಕಾಮ್ರೆಡ್ ರತ್ನಾಕರ ಶಣೈ ಹಾಗೂ ದೇವೇಂದ್ರ ಹೆಗಡೆ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ

**ಮಲ್ಲಮ್ಮ ನುಡಿ ವಾರ್ತೆ**

ಶಾಹಪೂರ: ಪಕ್ಷದ ರಾಜ್ಯ ಸಮಿತಿ ಕಚೇರಿ ಕಾರ್ಯದರ್ಶಿ, ಮಾಜಿ ರಾಜ್ಯ ಸಮಿತಿ ಸದಸ್ಯರು ಮತ್ತು ಬ್ಯಾಂಕ್ ಚಳುವಳಿಯ ಮುಖಂಡರಾಗಿದ್ದ ಕಾಮ್ರೇಡ್ ರತ್ನಾಕರ ಶೆಣೈ ಅವರು ಅನಾರೋಗ್ಯದ ಕಾರಣದಿಂದ ಆಸ್ಪತ್ರೆಯಲ್ಲಿ ಇಂದು ರಾತ್ರಿ ನಿಧನರಾದರು. ಅವರಿಗೆ ಸಿಪಿಐ(ಎಂ) ಯಾದಗಿರಿ ಜಿಲ್ಲಾ ಸಮಿತಿ ವತಿಯಿಂದ ಶ್ರದ್ಧಾಂಜಲಿ ಸಭೆ ಶಹಪುರ ತಾಲೂಕಿನ ಏರಿಯಾ ಸಾಹಿತಿಗಳಾದ. ದೇವೇಂದ್ರ ಹೆಗಡೆ ಅವರಿಗೂ ಸಹ ಶ್ರದ್ಧಾಂಜಲಿ ಸಲ್ಲಿಸಲಾಯಿತು.

22–9–2025 ರಂದು ಮಧ್ಯಾಹ್ನ 4:00 ಗಂಟೆಗೆ ಪಕ್ಷದ ಜಿಲ್ಲಾ ಸಮಿತಿ ಕಚೇರಿ ಕುಂಬಾರ ಓಣಿಯ ಕಾರ್ಯಾಲಯದಲ್ಲಿ ಶ್ರದ್ಧಾಂಜಲಿ ಸಭೆ. ಜಿಲ್ಲಾ ಸಮಿತಿ ಸದಸ್ಯರು ಭಾಗವಹಿಸಿದರು.

# ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಶನ್ ವತಿಯಿಂದ ಪ್ರತಿಭಟನೆ




**ಮಲ್ಲಮ್ಮ ನುಡಿ ವಾರ್ತೆ**

ಶಾಹಪೂರ: ತಾಲೂಕಿನ ಕಾರ್ಮಿಕ ಇಲಾಖೆಯಲ್ಲಿ ನಿಜವಾದ ಫಲಾನುಭವಿಗಳಿಗೆ ಯೋಜನೆಗಳು ಸಿಗದೇ ಯಾರ್ಯಾರೋ ಅನಾರ್ ಪಲಾನುಭವಿಗಳಿಗೆ ಯೋಜನೆಗಳ ದೊರಕತ್ತಿದ್ದು ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ನಿಜವಾದ ಫಲಾನುಭವಿಗಳು ಯಾರು? ಎಂಬುದು ಗುರುತಿಸಿ ಅವರಿಗೆ ಯೋಜನೆ ಸದ್ಬಳಕೆವಾಗಬೇಕು. ತಮ್ಮಗೆ ಮನಸ್ಸಿಗೆ ಬಂದ ಹಾಗೆ ಕೆಲವೊಂದು ಯೋಜನೆಗಳು ಅವರಿಗೆ ನೀಡುತ್ತಿರುವುದು ವಿಪರ್ಯಾಸ. ಕಾರ್ಮಿಕ ಇಲಾಖೆಯಲ್ಲಿ ಅತ್ಯಂತ ದೊಡ್ಡ ಮಟ್ಟದಲ್ಲಿ ಭ್ರಷ್ಟಾಚಾರ ನಡೆದಿರುವುದು ಕಂಡುಬರುತ್ತದೆ ಕೂಡಲೇ ನಿಜವಾದ ಫಲಾನುಭವಗಳನ್ನು ಯೋಜನೆ ದೊರಕಿದರೆ ಸಾರ್ಥಕವಾಗುತ್ತದೆ ಎಂದು ದೇವೇಂದ್ರ ಕುಮಾರ್ ಪತ್ರಿಕೆಗೆ ತಿಳಿಸಿದ್ದಾರೆ.

ಹೋರಾಟ ಮಾಡಲಾಯಿತು. ಇದರಲ್ಲಿ ತಾಲೂಕ ಸಮಿತಿ ಅಧ್ಯಕ್ಷ ದೇವಿಂದ್ರಕುಮಾರ್ ಹೋತಪೇಟ ತಾಲ್ಲೂಕ ಕಾರ್ಯದರ್ಶಿ ನಿಂಗಣ್ಣ, ಖಜಾಂಚಿ ಗೀತಾ ಹೋತಪೇಟ, ಉಪಾಧ್ಯಕ್ಷ ಹನಮಂತ್ರಯ ಮತ್ತು ಕಾರ್ಮಿಕರು ಭಾಗವಹಿಸಿದ್ದರು.

# ಮಕ್ಕಳ ಸಹಾಯವಾಣಿ ಸಂಖ್ಯೆ 1098

## ಎಲ್ಲಾ ಸರ್ಕಾರಿ, ಅರೆ ಸರ್ಕಾರಿ/ಸೇವಾ ಸಂಸ್ಥೆಗಳ ಕಟ್ಟಡಗಳ ಮೇಲೆ ಬರೆಯಲು ಮುಖ್ಯ ಕಾರ್ಯದರ್ಶಿಗಳ ಸೂಚನೆ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಸೆ.21:ರಾಜ್ಯದ ಎಲ್ಲಾ ಸರ್ಕಾರಿ, ಅರೆ ಸರ್ಕಾರಿ/ ಸೇವಾ ಸಂಸ್ಥೆಗಳ ಕಟ್ಟಡಗಳ ಮೇಲೆ ಮಕ್ಕಳ ಸಹಾಯವಾಣಿ ಸಂಖ್ಯೆ 1098 ನ್ನು ಕಡ್ಡಾಯವಾಗಿ ಬರೆಸಲು ಮುಖ್ಯ ಕಾರ್ಯದರ್ಶಿಗಳು ಸೂಚನೆ ನೀಡಿದ್ದಾರೆ.

ಮಕ್ಕಳ ಹಕ್ಕುಗಳ ರಕ್ಷಣೆ ಇಂದಿನ ತುರ್ತು ಅಗತ್ಯವಾಗಿದೆ. ಈಹಿನ್ನೆಲೆಯಲ್ಲಿ ಅನುಷ್ಠಾನಗೊಂಡಿರುವ ಮಿಷನ್ ವಾತ್ಸಲ್ಯ ಯೋಜನೆಯು ಮಕ್ಕಳ ಅಭಿವೃದ್ಧಿ ಮತ್ತು ರಕ್ಷಣೆಯ ಆದ್ಯತೆಯನ್ನು ಸಾಧಿಸುವ ಒಂದು ಮಾರ್ಗವಾಗಿದೆ.

ಸಂಕಷ್ಟದಲ್ಲಿನಹಾಗೂಸವಾಲಿನಲ್ಲಿರುವ ಮಕ್ಕಳ ಹಿತರಕ್ಷಣೆಗೆ ಹೆಚ್ಚು ಒತ್ತು ನೀಡುತ್ತಿದೆ. ಇಂತಹ ಮಕ್ಕಳ ಗುರುತಿಸುವಿಕೆ, ಸಂಕಷ್ಟಸ್ಥಿತಿಯಲ್ಲಿ ಮಾಹಿತಿ ಹಂಚಿಕೊಳ್ಳಲು ಹಾಗೂ ಪುನರ್ ವಸತಿ ಸೇವೆ ಕಲ್ಪಿಸುವಲ್ಲಿ ಮಕ್ಕಳ ಸಹಾಯವಾಣಿ 1098 ಮಹತ್ವದ ಪಾತ್ರ ವಹಿಸುತ್ತದೆ.

ಈ ಸಂಖ್ಯೆಯನ್ನು ವ್ಯಾಪಕವಾಗಿ ಪ್ರಚಾರ ಮಾಡಿದಲ್ಲಿ ಬಾಲ್ಯವಿವಾಹ, ಬಾಲಕಾರ್ಮಿಕತೆ ಸಂಕಷ್ಟದಲ್ಲಿನ ಮಕ್ಕಳ ರಕ್ಷಣೆ ಸೇರಿದಂತೆ ವಿವಿಧ ರೀತಿಯ ಮಕ್ಕಳ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸಲು ಸಾಧ್ಯವಾಗಲಿದೆ ಎಂದೂ ಹೇಳಿದ್ದಾರೆ.

ಈ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರದ ಎಲ್ಲಾ ಸರ್ಕಾರಿ, ಅರೆ ಸರ್ಕಾರಿ, ಶೈಕ್ಷಣಿಕ ಸಂಸ್ಥೆಗಳು, ಖಾಸಗಿ ಸೇವಾ ಸಂಸ್ಥೆಗಳು ಸೇರಿದಂತೆ ಎಲ್ಲಾ ಕಟ್ಟಡಗಳ ಮೇಲೆ ಮಕ್ಕಳ ಸಹಾಯವಾಣಿ ಸಂಖ್ಯೆ 1098 ನ್ನು ಕಡ್ಡಾಯವಾಗಿ ಶಾಶ್ವತ ಫಲಕದಲ್ಲಿ ಪ್ರದರ್ಶಿಸಲು ಮುಖ್ಯ ಕಾರ್ಯದರ್ಶಿಗಳು ಸೂಚನೆ ನೀಡಿದ್ದಾರೆ.

ಈಗಾಗಲೇ ಕೆಲವು ಇಲಾಖೆಗಳು ಈ ಕುರಿತು ಕ್ರಮವಹಿಸಿವೆ. ಕೆಲವು ಇಲಾಖೆಗಳಲ್ಲಿ ಈ ಬಗ್ಗೆ ನಿರ್ದೇಶನವಿಲ್ಲ ಎಂಬ ಗೊಂದಲಗಳಿಂದ ಶಾಶ್ವತ ಫಲಕಗಳಲ್ಲಿ ಪ್ರದರ್ಶಿಸದೇ ಇರುವುದು ತಿಳಿದು ಬಂದಿದ್ದು, ಮಕ್ಕಳ ಸಹಾಯವಾಣಿ ಸಂಖ್ಯೆಯನ್ನು ಶಾಶ್ವತ ಫಲಕದಲ್ಲಿ ಪ್ರದರ್ಶಿಸದೆ ಇರುವ ಇಲಾಖೆಗಳು ಯಾವುದೇ ಗೊಂದಲಗಳಿಗೆ ಆಸ್ಪದ ಕೊಡದೇ ತಕ್ಷಣ ಕ್ರಮಕೈಗೊಂಡು ಮಕ್ಕಳ ಸಹಾಯವಾಣಿ ಸಂಖ್ಯೆ 1098 ನ್ನು ತಮ್ಮ ಇಲಾಖೆಯ ಶಾಶ್ವತ ಫಲಕದಲ್ಲಿ ಪ್ರದರ್ಶಿಸುವಂತೆ ಮುಖ್ಯ ಕಾರ್ಯದರ್ಶಿಗಳು ತಿಳಿಸಿದ್ದಾರೆ.

# ಪ್ರಾಮಾಣಿಕತೆಯಿಂದ ಸೇವೆ ಸಲ್ಲಿಸಿ: ಅಪರ ಜಿಲ್ಲಾಧಿಕಾರಿ ಮಹಮ್ಮದ್ ಎನ್.ಝುಬೇರ್

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಸೆ.21-ಸರ್ಕಾರಿ ಹುದ್ದೆಗೆ ನೇಮಕಗೊಂಡಿರುವ ಅಧಿಕಾರಿಗಳು ಪ್ರಾಮಾಣಿಕತೆಯಿಂದ ಸೇವೆ ಸಲ್ಲಿಸುವ ಮೂಲಕ ಸರ್ಕಾರಕ್ಕೆ ಗೌರವ ತರಬೇಕು ಎಂದು ಅಪರ ಜಿಲ್ಲಾಧಿಕಾರಿ ಮಹಮ್ಮದ್ ಎನ್. ಝುಬೇರ್ ಅವರು ಹೇಳಿದರು.

ಶನಿವಾರ, ನಗರದ ಜಿಲ್ಲಾಧಿಕಾರಿ ಕಚೇರಿಯ ಕೆಸ್ವಾನ್ ಸಭಾಂಗಣದಲ್ಲಿ ಜಿಲ್ಲಾ ತರಬೇತಿ ಸಂಸ್ಥೆಯ 88 ನೇ ಸಾಮಾನ್ಯ ಬುನಾದಿ ತರಬೇತಿಯ ಅಭ್ಯರ್ಥಿಗಳನ್ನುಉದ್ದೇಶಿಸಿ ಅವರು ಮಾತನಾಡಿದರು.

ಸರ್ಕಾರಿ ಕೆಲಸ-ಕಾರ್ಯಗಳಲ್ಲಿ ದಕ್ಷತೆಯಿಂದ ಕಾರ್ಯನಿರ್ವಹಿಸಬೇಕು. ಸಮಯ ಪಾಲನೆ ಹೊಂದಬೇಕು. ನಿಸ್ವಾರ್ಥ ಸೇವೆ ಸಲ್ಲಿಸಬೇಕು ಎಂದು ಕಿವಿಮಾತು ಹೇಳಿದ ಅವರು, ಶುಭವಾಗಲಿ ಎಂದು ಆಶಿಸಿದರು.

ಈ ವೇಳೆ ಜಿಲ್ಲಾ ತರಬೇತಿ ಸಂಸ್ಥೆಯ ಉಪಪ್ರಾಚಾರ್ಯ ಶೇಷಗಿರಿ ನಾಯ್ಕ ಸೇರಿದಂತೆ ಅಭ್ಯರ್ಥಿಗಳು ಉಪಸ್ಥಿತರಿದ್ದರು.

# ಕರವೇ ಸೇನಾನಿ ರಾಜ್ಯ ಅಧ್ಯಕ್ಷರು ಪ್ರವೀಣ ಕುಮಾರ ಶೆಟ್ಟಿ ರವರ ಹುಟ್ಟು ಹಬ್ಬ ಆಚರಣೆ



ಮಲ್ಲಮ್ಮ ನುಡಿ ವಾರ್ತೆ

ಶಹಾಪೂರ-ಪಟ್ಟಣದ ಸರಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಕರ್ನಾಟಕ ರಕ್ಷಣಾ ವೇದಿಕೆಯ ತಾಲ್ಲೂಕು ಅಧ್ಯಕ್ಷರಾದ ವೆಂಕಟೇಶ ಬೊನೇರ್, ರವರ ನೇತೃತ್ವದಲ್ಲಿ ಕರ್ನಾಟಕ ರಕ್ಷಣಾ ವೇದಿಕೆಯ ರಾಜ್ಯಾಧ್ಯಕ್ಷರಾದ ಶ್ರೀ ಯುತ್ ಪ್ರವೀಣ ಕುಮಾರ ಶೆಟ್ಟಿ ರವರ ಹುಟ್ಟು ಹಬ್ಬದ ಅಂಗವಾಗಿ ರೋಗಿಗಳಿಗೆ, ಹಣ್ಣು-ಹಂಪಲು ವಿತರಣೆ ಮಾಡಲಾಯಿತು ಈ ಸಂದರ್ಭದಲ್ಲಿ ರೇವಣಸಿದ್ದಯ್ಯ ಡೆಂಗಿಮಠ,ಮಾರುತಿ ಚಂಡು, ನಾಗು ಶಾಸ್ತ್ರಿ,ದತ್ತು , ಭೀಮು ಹಳ್ಳಿಕಟ್ಟಿ,ಅನಿಲ ನಾಯ್ಕೋಡಿ, ಬೀಮಾಶಂಕರ ದರಿಯಾಪೂರ, ಇತರರು ಕರವೇ ಪದಾಧಿಕಾರಿಗಳು ಇದ್ದರು.

ರಾಜ ರೋಷವಾಗಿ ಯಾದಗಿರಿ ಜಿಲ್ಲೆಯ ಶಹಪುರ್ ತಾಲೂಕಿನಲ್ಲಿ ಅನ್ನ ಭಾಗ್ಯ ಅಕ್ಕಿ

# ಅಕ್ರಮವಾಗಿ ಸಾಗಾಟ ಮಾಡುತ್ತಿರುವ ಅಭಿನಯರಿಗೆ ಹೇಳೋರಿಲ್ಲ ಕೇಳೋರಿಲ್ಲ ಅಂದ ದರ್ಬಾರ್

(ಮಲ್ಲಿಕಾರ್ಜುನ ಎಂ)

ಮಲ್ಲಮ್ಮ ನುಡಿ ವಾರ್ತೆ

ಶಹಪುರ್ ನಗರದ ಕೋಲ್ಕಾರ್ ಓಣಿಯಲ್ಲಿ ಮನೆ ಮನೆಗೆ ತೆರಳಿ ಅಕ್ಕಿ ಸಂಗ್ರಹ ಮಾಡಿಕೊಂಡು ಬರುತ್ತಿರುವ ಅನ್ನಭಾಗ್ಯಹಕ್ಕು ಕರ್ನಾಟಕ ರಾಜ್ಯದ ರಾಜಕಾರಣಿಗಳ ಗಮನ ಸೆಳೆದ ಯಾದಗಿರಿ ಜಿಲ್ಲೆ ಯಾದಗಿರಿ ಜಿಲ್ಲೆಯಲ್ಲಿ ಹೆಗ್ಗಿಲ್ಲದೆ ಸಾಗುತ್ತಿದ್ದರು ಮೂಖ ಪ್ರೇಕ್ಷಕರಾಗಿ ಕುಂತಿರುವ ಆಹಾರ ಇಲಾಖೆ ಅಧಿಕಾರಿಗಳು. ಇದರ ಬಗ್ಗೆ ಕರ್ನಾಟಕ ಪ್ರಾಂತ ರೈತ ಸಂಘ ತಾಲೂಕ ಸಮಿತಿ ನೇತೃತ್ವದಲ್ಲಿ ಬಹಳಷ್ಟು ಬಾರಿ ರೇಡ್ ಅಂಡ್ ಆಗಿ ಸೀಜ್ ಮಾಡಿಸಿ ಶಹಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾದರು ಅಂಜದ ಹಳಕದೆಕಳಸಾಗಾಣಿಕೆ ಮಾಡುತ್ತಿರುವ ವ್ಯಾಪಾರಸ್ಥರು.? ರಾಜಕಾರಣಿಗಳು ಕಿವುಡರು. ? ಎಷ್ಟೋ ಬಾರಿ ಕನ್ನಡ ದಿನಪತ್ರಿಕೆ ಹಾಗೂ ಟಿವಿ ಮಾಧ್ಯಮದಲ್ಲಿ ಪ್ರಕಟಣೆಯಾದರು ಕೇಳದಂತೆ ವರ್ತಿಸುತ್ತಿರುವ ರಾಜ್ಯದ ರಾಜಕಾರಣಿಗಳು? ? ಕಣ್ಣೆದುರಲ್ಲಿ ಅಕ್ರಮ ಅಕ್ಕಿ ಸಾಗಾಟ ನಡೆದರು ಕಣ್ಣಿಗೆ ಕಾಣದಂತೆ ವರ್ತಿಸುತ್ತಿರುವ ಭ್ರಷ್ಟ ಜಿಲ್ಲಾ ಮಟ್ಟದ ಅಧಿಕಾರಿಗಳು?




? ಜನಸಾಮಾನ್ಯರು ಮಾತ್ರ ಮೂಕರಾಗಿಲ್ಲ. ಕನ್ನಡ ದಿನಪತ್ರಿಕೆಯಲ್ಲಿ ಟಿವಿ ಮಾಧ್ಯಮದಲ್ಲಿ ಅಕ್ರಮಕ್ಕೆ ಸಾಗಾಟನೆ ಬಗ್ಗೆ ಧ್ವನಿ ಎತ್ತುತ್ತಿರುವ ಧೀಮಂತರು. ರಾಜಕಾರಣಿಗಳ ಕಿವುಡ್ರಾದರೆ ಅಧಿಕಾರಿಗಳು ಕೊಡ್ರಾದರೆ ಜನರ ಮಾತ್ರ ಮೂಖರ್ ಆಗಿಲ್ಲ ಎಂದು ಹೇಳಲು ಇಚ್ಚಿಸುತ್ತೇನೆ. ಇಂಥ ಕದೀಮರಿಗೆ ಕಾನೂನು ತಳಕ ತೊಡಿಸುವುದು ಯಾವಾಗ ಎಂಬುದು ಯಕ್ಷಪ್ರಶ್ನೆಯಗಿದೆ ಇಂಥ ಜಿಲ್ಲೆಯಲ್ಲಿ ಈ ರೀತಿ ಮಾಡುತ್ತಿರುವುದು ವಿಪರ್ಯಾಸ ಇನ್ನಾದರೂ ಎಚ್ಚೆತ್ತು-ಕೊಂಡು ರಾಜಕಾರಣಿಗಳು ಹಾಗೂ ಪೊಲೀಸ್ ಅಧಿಕಾರಿಗಳು ಕೂಡ ಇಂಥ ಮಾಫಿಯಾ ಮಾಡುವ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ಭೀಮರಾಯ ಪೂಜಾರಿ ಪತ್ರಿಕೆಗೆ ತಿಳಿಸಿದ್ದಾರೆ.

# ಹುರಸಗುಂಡಿಗಿ ಗ್ರಾಪಂ: ಅನುದಾನ ದುರ್ಬಳಕೆ


(ಮಲ್ಲಿಕಾರ್ಜುನ ಎಂ.)

ಮಲ್ಲಮ್ಮ ನುಡಿ ವಾರ್ತೆ

ಶಹಾಪುರ ತಾಲೂಕಿನ ಹುರಸಗುಂಡಿಗಿ ಗ್ರಾಮದಲ್ಲಿ ಎರಡು ನೀರಿನ ಘಟಕಗಳ ದುರಸ್ಥಿ ಕಾಮಗಾರಿ ಹೆಸರಲ್ಲಿ ರೊಟ್ಟಿ ಬಿಲ್ ತಯಾರಿಸಿ ಸರಕಾರದ 3,33,779 ರೂಪಾಯಿ ಅನುದಾನ ದುರ್ಬಳಕೆಯಾಗಿದ್ದು, ಈ ಬಗ್ಗೆ ಸಮಗ್ರ

ತನಿಖೆ ಮಾಡಬೇಕು ಎಂದು ಸರ್.ಎಂ. ವಿಶ್ವೇಶ್ವರಯ್ಯ ಕಟ್ಟಡ ಕಾರ್ಮಿಕರ ಸಂಘದ ತಾಲೂಕ ಅಧ್ಯಕ್ಷ ಪ್ರದೀಪ ಅಣಬಿ ಆಗ್ರಹಿಸಿದ್ದಾರೆ.

ಕಾಮಗಾರಿಯ ಹೆಸರಿನಲ್ಲಿ ತೆ-ೂಟ್ಟಿ ಬಿಲ್ ತಯಾರಿಸಿ ಅನುದಾನ ಮೊತ್ತವನ್ನು ದುರಪಯೋಗ ಮಾಡಿಕೊಂಡಿದ್ದಾರೆ. ಶ್ರೀಶೈಲ ಏಜೆನ್ಸಿಯವರಿಗೆ




ಕೆಲಸ ನೀಡಿರುತ್ತೇನೆಂದು, ಅವರ ಹೆಸರಿನಲ್ಲಿ 7 ಬಾರಿ ಬಿಲ್ ಮಾಡಿ ಸರಕಾರದ ಹಣ ದುರ್ಬಳಕೆ ಮಾಡಿಕೊಂಡಿದ್ದಾರೆ. ಗ್ರಾಮದಲ್ಲಿ 2 ನೀರಿನ

ಘಟಕಗಳಿದ್ದು ಇದರ ದುರಸ್ಥಿ ಕಾಮಗಾರಿ ಮಾಡಲಾಗಿದೆ ಎಂದು ಬಿಲ್ ಮಾಡಲಾಗಿದೆ.

ಈ ಬಗ್ಗೆ ಸಮಗ್ರ ತನಿಖೆ ಮಾಡಿ ಸಂಬಂಧಪಟ್ಟವರ ವಿರುದ್ಧ

ಕಾನೂನು ಕ್ರಮಕೈಗೊಳ್ಳಬೇಕೆಂದು

# ಭೀಮಾರಾಯನಗುಡಿ : ನಾಳೆಯಿಂದ ಶ್ರೀ ದೇವಿ ಪುರಾಣ ಪಠಣ

ಮಲ್ಲಮ್ಮ ನುಡಿ ವಾರ್ತೆ

ಶಹಾಪುರ: ಶರನ್ನವರಾತ್ರಿ ಪ್ರಯುಕ್ತ ಸೆ. 22 ರಿಂದ ಅಕ್ಟೋಬರ್ 02 ರ ವರೆಗೆ ಪ್ರತಿದಿನ ಸಾಯಂಕಾಲ 06-30 ರಿಂದ 08-30 ರವರೆಗೆ ಶ್ರೀದೇವಿ ಪುರಾಣ ಕಾರ್ಯಕ್ರಮ ಆಯೋಜಿಸಲಾಗಿದೆ. ನಗರದ ಸಮೀಪದ ಭೀಮರಾಯನಗುಡಿಯ ದ್ಯಾವಮ್ಮದೇವಿ ದೇವಸ್ಥಾನದ ಆವರಣದಲ್ಲಿ ಪ್ರವಚಕಾರ ಸಿದ್ದೇಶ್ವರ ಶಾಸ್ತ್ರಿಗಳು ಗದ್ದಿಗಿಮಠ ಅವರಿಂದ ಒಂಬತ್ತು ದಿನಗಳವರೆಗೆ ಶ್ರೀದೇವಿ



ಮಹಾತ್ಮೆ ಕುರಿತು ಪ್ರವಚನ ಪಠಣ ನೆರವೇರಲಿದೆ. ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ದಿಗ್ಗಿಯ ಸಂಗಮೇಶ್ವರ ದೇವಸ್ಥಾನದ ಪೂಜ್ಯರಾದ ವೇದಮೂರ್ತಿ ದೇವಯ್ಯಸ್ವಾಮಿಜಿ ವಹಿಸಿಕೊಳ್ಳುವರು, ಬಲಭೀಮೇಶ್ವರ ದೇವಸ್ಥಾನದ ಈಶ್ವರಪ್ಪ ಹೂಗಾರ, ಮುಖಂಡರಾದ ಗುರುನಾಥರಡ್ಡಿ ದರ್ಶನಾಪುರ ಉಪಸ್ಥಿತರಿರುವರು.

ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಮಹಾತಾಯಿ ಶೀದೇವಿಯ ಮಹಾತ್ಮೆ ಪುರಾಣ ಆಲಿಸಿ ಪುನೀತರಾಗಬೇಕು ಎಂದು ದೇವಸ್ಥಾನದ ಅರ್ಚಕ ನಿಂಗಣ್ಣ ಹೂಗಾರ ಅವರು ತಿಳಿಸಿದ್ದಾರೆ.

ರಾಯಚೂರು ಒಕ್ಕಲುತನ ಹುಟ್ಟುವಳಿ ಮಾರಾಟ, ಸಂಸ್ಕರಣ

# ಸಹಕಾರ ಸಂಘದ 70ನೇ ವಾರ್ಷಿಕ ಮಹಾಸಭೆ ಯಶಸ್ವಿ



ಮಲ್ಲಮ್ಮ ನುಡಿ ವಾರ್ತೆ

ರಾಯಚೂರು ಸೆಪ್ಟೆಂಬರ್ 21-: ಇಲ್ಲಿನ ರಾಯಚೂರು ಒಕ್ಕಲುತನ ಹುಟ್ಟುವಳಿ ಮಾರಾಟ ಹಾಗೂ ಸಂಸ್ಕರಣ ಸಹಕಾರ ಸಂಘ ನಿಯಮಿತದ ಸಂಘದ 70ನೇ ವಾರ್ಷಿಕ ಮಹಾಸಭೆಯು ಸಂಘದ ಅಧ್ಯಕ್ಷರಾದ ಜಯವಂತರಾವ್ ಪತಂಗೆ ಅವರ ಅಧ್ಯಕ್ಷತೆಯಲ್ಲಿ ಸಂಘದ ಕಚೇರಿ ಸಭಾಂಗಣದಲ್ಲಿ ಸೆಪ್ಟೆಂಬರ್ 19ರಂದು ಯಶಸ್ವಿಯಾಗಿ ನಡೆಯಿತು.

ಈ ವೇಳೆ ಜಯವಂತರಾವ್ ಪತಂಗೆ ಅವರು ಮಾತನಾಡಿ, ಸಂಘದಲ್ಲಿ ರೈತರಿಗಾಗಿ ರಸಗೊಬ್ಬರ, ಬೆಂಬಲ ಬೆಲೆಯಲ್ಲಿ ಜೋಳ, ತೊಗರಿ ಖರೀದಿ ಹಾಗೂ ಕೃಷಿ ಹುಟ್ಟುವಳಿಗಳ ದಾಸ್ತನು ಸಂಗ್ರಾಹಣೆಗಾಗಿ ಗೋದಾಮು ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದರು. ರೈತರು ತಮ್ಮ ಕೃಷಿ ಉತ್ಪನ್ನಗಳನ್ನು ಉತ್ತಮವಾಗಿ ಮಾರಾಟ ಮಾಡುತ್ತಿದ್ದಾರೆ. ಇಡೀ ರಾಜ್ಯದಲ್ಲಿ ಯಾವ ತಾಲೂಕು ಪತ್ತಿನ ಸಹಕಾರ ಸಂಘಗಳು ಮಾಡದ ಸಾಧನೆಯನ್ನು ರಾಯಚೂರಿನ ಸಂಘವು ಮಾಡಿದೆ ಎಂದು ಅವರು ತಿಳಿಸಿದರು.

ಇಂಡಿಯನ್ ಆಯಿಲ್ ಕಾರ್ಪೊರೇಷನ್ ಪೆಟ್ರೋಲ್ ಬಂಕನ್ನು ನಿರ್ಮಾಣ ಮಾಡಿ ಅನೇಕ ವ್ಯಾಪಾರ ಅಭಿವೃದ್ಧಿ ಕಾರ್ಯಕ್ರಮಗಳನ್ನು ಸಹ ರೈತರು ಉಪಯೋಗಿಸಿಕೊಳ್ಳಬೇಕೆಂದು ತಿಳಿಸಿದರು.

ಈ ವೇಳೆ, ಕೃಷಿ ಉತ್ಪನ್ನಗಳ ವ್ಯಾಪಾರ ಚಟುವಟಿಕೆಯಲ್ಲಿ ಪ್ರಥಮ ಸ್ಥಾನ ಪಡೆದ ಜಯಪ್ರಕಾಶ್ ರೆಡ್ಡಿ ಹೆಗ್ಗಸನಹಳ್ಳಿ, ದ್ವಿತೀಯ ಸ್ಥಾನ ಪಡೆದ ಮಲ್ಲಿಕಾರ್ಜುನಗೌಡ ಮಂಚಲಾಪೂರ, ತೃತೀಯ ಸ್ಥಾನ ಪಡೆದ ಶ್ರೀಮತಿ ಶಿವಲಿಂಗಮ್ಮ ಸಾ.ವತ್ತೂರು ಹಾಗೂ ಸಕಾಲಕ್ಕೆ ಸಂಘಕ್ಕೆ ರಸಗೊಬ್ಬರ ಪೂರೈಕೆಗೆ ಸಹಕರಿಸಿದ ಸಚೀನ್ ಇಫ್ಕೋ, ಶಶಿಕುಮಾರ್ ಕ್ರಿಫ್ಕೊ, ಸುನೀಲ್ ಅವರಿಗೆ ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು.

ಇದೇ ಸಚಿದರ್ಭದಲ್ಲಿ ಉಪಾಧ್ಯಕ್ಷರಾದ ಶಶಿಧರ ಪಾಟೀಲ್, ನಿರ್ದೇಶಕರಾದ ಮಲ್ಲನಗೌಡ ಪಾಟೀಲ್, ಕೆ.ಶರಣಪ್ಪ ಕಲ್ಕಲಾ, ಶರಬಣ್ಣಗೌಡ ಶ್ರೀನಿವಾಸಪೂರ, ಮಲ್ಲಪ್ಪ ಗೌಡ, ಶಂಕರ ರಡ್ಡಿ, ಉಮೇಶ ಗೌಡ, ಎನ್.ಭೀಮರೆಡ್ಡಿ, ಲೆಕ್ಕಪರಿಶೋಧಕರಾಧ ವೆಂಕಟ ಕೃಷ್ಣನ್ ಇದ್ದರು.

ವಾರ್ಷಿಕ ಮಹಾ ಸಭೆಯ ಗೊತ್ತುವಳಿಗಳನ್ನು ಲೇಕಪಾಲರಾದ ನರಸಿಂಹಪ್ಪ ಮಂಡಿಸಿದರು. ನಿಯೋಜಿತ ಚಟುವಟಿಕೆಗಳ ಮಂಡನೆಯನ್ನು ನರಸಿಂಹಪ್ಪ ಮಾಡಿದರು. ಪ್ರಧಾನ ವ್ಯವಸ್ಥಾಪಕರಾದ ಬಂದಯ್ಯ ಅವರು ನಿರೂಪಿಸಿದರು. ಶೇಖಹುಸೇಸ್ ಅವರು ವಂದಿಸಿದರು.




ತಾಳಿಕೋಟಿ:ವಿಭಾಗದ ಸರ್ಕಾರಿ ಪ್ರಾಥಮಿಕ ಶಿಕ್ಷಕರ ಪತ್ತು ಬೆಳೆಸುವ ಸಹಕಾರಿ ಸಂಘ ಇದರ 59ನೇ ವಾರ್ಷಿಕ ಸರ್ವಸಾಧಾರಣ ಸಭೆಯಲ್ಲಿ ಮುಖ್ಯಶಿಕ್ಷಕ ಹುದ್ದೆಯಿಂದ ಕ್ಷೇತ್ರ ಸಮನ್ವಯಾಧಿಕಾರಿ ನಿಯೋಜನೆಗೊಂಡ ಶಿಕ್ಷಕ ಆರ್.ಬಿ.ದಮ್ಮೂರಮಠ ಇವರನ್ನು ಸಂಘದ ವತಿಯಿಂದ ಶನಿವಾರ ಸನ್ಮಾನಿಸಿ ಗೌರವಿಸಲಾಯಿತು. ಸಂಘದ ಅಧ್ಯಕ್ಷ ಸುರೇಶ ವಾಲಿಕಾರ, ಉಪಾಧ್ಯಕ್ಷ ಪಿ.ವೈ.ಚಲವಾದಿ, ಶಿಕ್ಷಕರ ಸಂಘದ ಅಧ್ಯಕ್ಷ ಬಿ.ಟಿ. ನಿರ್ದೇಶಕರಾದ ಯು.ಜಿ.ಮಕಾನದಾರ,ಜಿ.ಕೆ.ಪತ್ತಾರ, ಶ್ರೀಮತಿ ಜಿ.ಟಿ.ಬಿರಾದಾರ, ಆರ್.ಕೆ.ಹಂಚಾಟೆ, ಶಿವಪ್ಪ ಬೈಚಬಾಳ, ಕಾಸೀಮ ಜಮಾದಾರ, ಕಾರ್ಯದರ್ಶಿ ಎಸ್.ಎಸ್.ಬೊಮ್ಮನಹಳ್ಳಿ ಇದ್ದರು. (ಮಲ್ಲಮ್ಮ ನುಡಿ ಚಿತ್ರ)

# ಪ್ರಾಥಮಿಕ ಶಿಕ್ಷಕರ ಸಹಕಾರಿ ಸಂಘದ 59ನೇ ವಾರ್ಷಿಕ ಸಭೆ ಸಕಾಲಕ್ಕೆ ಸಾಲ ಮರುಪಾವತಿಸಲು ಸಲಹೆ

ಮಲ್ಲಮ್ಮ ನುಡಿ ವಾರ್ತೆ

ತಾಳಿಕೋಟಿ: ಸದಸ್ಯರು ಸಂಘದೊಂದಿಗೆ ಉತ್ತಮ ವ್ಯವಹಾರ ಇಟ್ಟುಕೊಂಡು ಪಡೆದುಕೊಂಡ ಸಾಲವನ್ನು ಸಕಾಲಕ್ಕೆ ಮರುಪಾವತಿ ಮಾಡಿದರೆ ಸಂಘ ಅಭಿವೃದ್ಧಿ ಹೊಂದಿ ಪ್ರಗತಿಯನ್ನು ಸಾಧಿಸಲು ಅನುಕೂಲವಾಗುತ್ತದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಬಿ.ಎಸ್. ಸಾವಳಗಿ ಹೇಳಿದರು. ಶನಿವಾರ ತಾಳಿಕೋಟಿ ವಿಭಾಗದ ಸರ್ಕಾರಿ ಪ್ರಾಥಮಿಕ ಶಿಕ್ಷಕರ ಪತ್ತು ಬೆಳೆಸುವ ಸಹಕಾರಿ ಸಂಘದ 59 ನೇ ವಾರ್ಷಿಕ ಸರ್ವ ಸಾಧಾರಣ ಸಭೆಯಲ್ಲಿ ಅವರು ಮಾತನಾಡಿದರು. ಸಾಲವನ್ನು ಅಗತ್ಯಕ್ಕೆ ತಕ್ಕಂತೆ ತೆಗೆದುಕೊಳ್ಳಿ ಅತಿಯಾದ ಸಾಲ ಮನುಷ್ಯನ ನೆಮ್ಮದಿಯನ್ನು ಹಾಳು ಮಾಡುತ್ತದೆ ಜೀವನದಲ್ಲಿ ಮಿತವೆಯ ನೀತಿಯನ್ನು ಪಾಲಿಸಿ ಎಂದು ಕಿವಿಮಾತು ಹೇಳಿದರು. ಪೀರಾಪೂರ ಸರ್ಕಾರಿ ಪ್ರೌಢಶಾಲೆ ಮುಖ್ಯಶಿಕ್ಷಕ ಆರ್.ಬಿ.ದಮ್ಮೂರಮಠ ಮಾತನಾಡಿ ಈ ಸಂಘದ ಸಂಸ್ಥಾಪಕರು ಕಷ್ಟಪಟ್ಟು ಸಂಘವನ್ನು ಕಟ್ಟಿ ಬೆಳೆಸಿದ್ದಾರೆ ಇದನ್ನು ರಕ್ಷಿಸಿಕೊಂಡು ಹೋಗಬೇಕು. ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಸಿಗದ ಸೌಲಭ್ಯಗಳು ನಮಗಿಲ್ಲಿ ಸಿಗುತ್ತವೆ ಇದು ಕೇವಲ ಶಿಕ್ಷಕರ ಅನುಕೂಲಕ್ಕಾಗಿ ಇರುವ ಸಂಘ ಇದರ ಕುರಿತು ಎಲ್ಲರಿಗೂ ಕಾಳಜಿ ಇರಬೇಕಾಗಿದೆ ಎಂದರು. ಸಭೆಯ ಅಧ್ಯಕ್ಷತೆ ವಹಿಸಿ ಸಂಘದ ಅಧ್ಯಕ್ಷ ಸುರೇಶ ವಾಲಿಕಾರ ಅವರು ಮಾತನಾಡಿ ಸಂಘದ ಪ್ರಗತಿಗೆ ಎಲ್ಲರ ಸಹಕಾರದ ಅಗತ್ಯವಿದೆ ಇದೊಂದು ಮಾದರಿ ಸಂಘವನ್ನಾಗಿ ಮಾಡುವುದು ನಮ್ಮ ಉದ್ದೇಶವಾಗಿದೆ ಎಂದರು. ಇದೇ ಸಂದರ್ಭದಲ್ಲಿ ಹಾಲಿ ವರ್ಷದಲ್ಲಿ ಸೇವಾ ನಿವೃತ್ತಿ ಹೊಂದಿದ ಶಿಕ್ಷಕ-ಶಿಕ್ಷಕಿಯರಿಗೆ, ಈ ಬಾರಿಯ ಎಸ್ ಎಸ್ ಎಲ್ ಸಿ ಹಾಗೂ ಪಿಯುಸಿಯಲ್ಲಿ ಅತಿ ಹೆಚ್ಚು ಅಂಕಗಳಿಸಿದ ಸಂಘದ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ಬಿಇಓ ಬಿ.ಎಸ್.ಸಾವಳಗಿ, ಕ್ಷೇತ್ರ ಸಮನ್ವಯಾಧಿಕಾರಿಯಾಗಿ ನಿಯೋಜನೆಗೊಂಡ ಆರ್.ಬಿ.ದಮ್ಮೂರಮಠ ಹಾಗೂ ರಾಜ್ಯಮಟ್ಟದ ಉತ್ತಮ ಶಿಕ್ಷಕಿ ಪ್ರಶಸ್ತಿ ಪುರಸ್ಕೃತ ಮಡಿವಾಳಮ್ಮ ನಾಡಗೌಡ ಇವರಿಗೆ ವಿಶೇಷ ಸನ್ಮಾನ ನೀಡಲಾಯಿತು. ಶ್ರೀಮತಿ ಲಕ್ಷ್ಮೀಬಾಯಿ ಹಾಗೂ ಶಿವಲಿಂಗಮ್ಮ ಇವರ ಸ್ಮರಣಾರ್ಥವಾಗಿ ಭಾಗ್ಯಶ್ರೀ ವಿ. ಹೊಸಕೋಟೆಯವರು ಕಾಣಿ-ಕೆಯಾಗಿ ನೀಡಿದ ಬ್ಯಾಗ್ ಗಳನ್ನು ಸದಸ್ಯರಿಗೆ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಸ.ಪ್ರಾ.ಶಾ.ಶಿ.ಸಂ. ತಾ.ಅಧ್ಯಕ್ಷ ಬಿ.ಟಿ.ವಜ್ಜಲ, ಉಪಾಧ್ಯಕ್ಷ ಪಿ.ವೈ.ಚಲವಾದಿ, ಶಂಕರಗೌಡ ಬಿರಾದಾರ, ನಿವೃತ್ತ ಶಿಕ್ಷಕ ರೋಷನ ಡೋಣಿ, ಸಿ.ಆರ್.ಸಿ.ರಾಜು ವಿಜಾಪುರ, ನಿರ್ದೇಶಕರಾದ ಯು.ಜಿ.ಮಕಾನದಾರ, ಶಿವಪ್ಪ ಬೈಚಬಾಳ, ಕಾಶಿಮ್ ಜಮಾದಾರ, ಜಿ.ಕೆ.ಪತ್ತಾರ, ಆರ್.ಕೆ.ಹಂಚಾಟೆ, ಡಿ.ಸಿ.ಕಲಾಲ, ಎಸ್.ಎಂ.ಬಂಟನೂರ, ಎಸ್.ಎಸ್.ಬಿಂಜಲಭಾವಿ, ಬಸವರಾಜ ಹುಲ್ಲೂರ, ಜಿ.ಟಿ.ಬಿರಾದಾರ, ಝಡ್. ಎಂ. ಅರ್ಜುಣಗಿ, ಕಾರ್ಯದರ್ಶಿ ಎಸ್.ಎಸ್. ಬೊಮ್ಮನಹಳ್ಳಿ ಹಾಗೂ ಸಂಘದ ಸದಸ್ಯರು ಇದ್ದರು.

# ಶಿಕ್ಷಣದಿಂದ ಸಾಮಾಜಿಕ ಬದಲಾವಣೆ: ಅಶ್ವತ್ ನಾರಾಯಣಗೌಡ

ಮಲ್ಲಮ್ಮ ನುಡಿ ವಾರ್ತೆ

ತಗಡೂರು, (ಚನ್ನರಾಯಪಟ್ಟಣ ತಾಲೂಕು):ನಲವತ್ತು ವರ್ಷಗಳ ಕಾಲ ಆ ಶಾಲೆಯಲ್ಲಿ ಕಲಿತ ವಿದ್ಯಾರ್ಥಿಗಳೆಲ್ಲರೂ ಒಂದೆಡೆ ಸೇರಿ, ತಮಗೆ ಪಾಠ ಕಲಿಸಿದ ಶಿಕ್ಷಕರನ್ನು ಪುಷ್ಪವೃಷ್ಟಿ ಮಾಡಿ ವೇದಿಕೆಗೆ ಸ್ವಾಗತಿಸಿ ಆತ್ಮೀಯವಾಗಿ ಸನ್ಮಾನಿಸುವ ಮೂಲಕ ಗುರುವಂದನಾ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿಸಿದರು.

ತಾಲೂಕಿನ ನುಗ್ಗೇಹಳ್ಳಿ ಹೋಬಳಿಯ ತಗಡೂರು ಗ್ರಾಮದ ಸರ್ಕಾರಿ ಪ್ರೌಢಶಾಲೆ ಮತ್ತು ಪ್ರಾಥಮಿಕ ಶಾಲೆಯ ವಿದ್ಯಾರ್ಥಿ ಬಳಗದ ವತಿಯಿಂದ ಆಯೋಜಿಸಿದ್ದ ಗುರುವಂದನೆ ಹಾಗೂ ಹಳೆಯ ವಿದ್ಯಾರ್ಥಿಗಳ ಸ್ನೇಹ ಸಮ್ಮಿಲನ ಕಾರ್ಯಕ್ರಮ ವಿಭಿನ್ನವಾಗಿ ಮೂಡಿ ಬಂದಿದ್ದಲ್ಲದೆ, ಜನಮನ ಸೆಳೆಯಿತು.

ಗುರುವಂದನಾ ಕಾರ್ಯಕ್ರಮ ಉದ್ಘಾಟಿಸಿದ ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಧೀಶರಾದ ಕೆ.ಎಚ್.ಅಶ್ವತ್ಥ ನಾರಾಯಣಗೌಡ ಅವರು, ನಾನೂ ಒಬ್ಬ ಉಪಾಧ್ಯಾಯನ ಮಗನಾಗಿ ಈ ಎತ್ತರಕ್ಕೆ ಬೆಳೆಯಲು ಸಾಧ್ಯವಾಗಿದೆ. ನೀವು ಕೂಡ ನಿಮ್ಮ ಭವಿಷ್ಯವನ್ನು ಉಜ್ವಲ ಮಾಡಿಕೊಳ್ಳಲು ಗುರುವಿನ ಕೃಪೆ ಮುಖ್ಯವಾಗಿದೆ ಎಂದರು.

ಪ್ರಸ್ತುತ ಸಮಾಜದಲ್ಲಿ ಎಲ್ಲ ವರ್ಗಗಳಲ್ಲೂ ಬದಲಾವಣೆ ತರಲು ಶಿಕ್ಷಣದಿಂದ ಮಾತ್ರ ಸಾಧ್ಯ. ಹೀಗಾಗಿ ಪಾಲಕರು ಮಕ್ಕಳನ್ನು ಶಿಕ್ಷಣವಂತರಾಗಿ ಮಾಡಬೇಕೆಂದು ಸಲಹೆ ನೀಡಿದರು. ಹಳೆಯ ವಿದ್ಯಾರ್ಥಿಗಳು ಒಂದೆಡೆ ಸೇರಿ ತಮ್ಮ ನೆಚ್ಚಿನ ಶಿಕ್ಷಕರಿಗೆ ಗುರುವಂದನೆ ಸಲ್ಲಿಸುವ ಸಲುವಾಗಿ ಕಾರ್ಯ ಕ್ರಮವನ್ನು ಆಯೋಜಿಸಿರುವ ಕಾರಣ ಹಳೆಯ ವಿದ್ಯಾ ರ್ಥಿಗಳಿಗೆ ಶಿಕ್ಷಣದ ಮೌಲ್ಯ ತಿಳಿದಿದೆ. ಆ ಕಾರಣದಿಂದಲೇ ತನ್ನ ನೆಚ್ಚಿನ ಶಿಕ್ಷಕರಿಗೆ ಗುರು ವಂದನೆ ಸಲ್ಲಿಸುವ ಮೂಲಕ ಗುರು ಶಿಷ್ಯರ ಬಾಂಧವ್ಯ ಇನ್ನಷ್ಟು ಗಟ್ಟಿಗೊಳಿಸುವ ಕೆಲಸವನ್ನು ಕಾರ್ಯಕ್ರಮದ ಮೂಲಕ ಮಾಡಲಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

40 ಶಾಲೆ ಉಳಿಸಲು ಕ್ರಮ:

ಶಾಸಕ ಸಿ.ಎನ್.ಬಾಲಕೃಷ್ಣ ಮಾತನಾಡಿ, ಸರ್ಕಾರಿ ಶಾಲೆಗಳನ್ನು ಉಳಿಸುವ ಸಲುವಾಗಿ ಪಾಲಕರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ದಾಖಲಿಸಬೇಕು. ಆಗ ಮಾತ್ರ ಸರ್ಕಾರಿ ಶಾಲೆಗಳು ಮುಚ್ಚುವುದನ್ನು ತಡೆಯಬಹುದು ಎಂದರು.

ತಾಲೂಕಿನಲ್ಲಿ ಸುಮಾರು 40 ಪ್ರೌಢಶಾಲೆಗಳಿದ್ದು, ಮುಂಬರುವ ಶೈಕ್ಷಣಿಕ ವರ್ಷದಿಂದ ದಾಖಲಾತಿ ಹೆಚ್ಚಳ ಮಾಡಲು ಉದ್ದೇಶಿಸಲಾಗಿದೆ. ಇದು ಒಬ್ಬರಿಂದ ಆಗುವ ಕೆಲಸವಲ್ಲ. ಎಲ್ಲರೂ ಕೈ ಜೋಡಿಸುವಂತೆ ಕರೆ ನೀಡಿದರು.

ಪ್ರೀತಿ, ವಿಶ್ವಾಸಕ್ಕೆ ಬೆಲೆ ಕಟ್ಟಲಾಗದು:

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಮಾತನಾಡಿ, ನಲವತ್ತು ವರ್ಷಗಳ ಹಿಂದೆ ಕಷ್ಟದ ದಿನದಲ್ಲಿ ಈ ಶಾಲೆಯಲ್ಲಿ ಓದಿದ ದಿನಗಳನ್ನು ನೆನಪಿಸಿಕೊಂಡಿದ್ದಲ್ಲದೆ, ಆಗಿನ ಪ್ರೀತಿ ವಿಶ್ವಾಸಕ್ಕೆ ಬೆಲೆ ಕಟ್ಟಲಾಗದು ಎಂದರು.

ಶಿಕ್ಷಣದಿಂದ ಜ್ಞಾನವನ್ನು ಪಡೆದು ಎತ್ತರಕ್ಕೆ ಬೆಳೆಯಲು ಸಾಧ್ಯವಾಗುತ್ತದೆ. ಈ ಹಿಂದೆ ಶಿಕ್ಷಣ ಪಡೆಯುವುದು ಅಷ್ಟು ಸುಲಭವಾಗಿರಲಿಲ್ಲ. ಗ್ರಾಮೀಣ ಪ್ರದೇಶದಲ್ಲಿ ಶಾಲೆಗಳ ಕೊರತೆ ಇತ್ತು. ಆದರೆ ಇಂದಿನ ವೈಜ್ಞಾನಿಕ ಯುಗದಲ್ಲಿ ಶಿಕ್ಷಣವೂ ಈಗ ವ್ಯಾಪಾರೀಕರಣವಾಗಿದೆ. ಸರ್ಕಾರಿ ಶಾಲೆಗಳು ಮುಚ್ಚುತ್ತಿದ್ದು, ಸರ್ಕಾರ ಗಂಭೀರವಾಗಿ ಚಿಂತಿಸುವ ಅವಶ್ಯಕತೆ ಇದೆ ಎಂದರು.

5 ಲಕ್ಷ ರೂ ನೆರವು:

ವಿಧಾನ ಪರಿಷತ್ ಸದಸ್ಯರಾದ ಡಾ.ಸೂರಜ್ ರೇವಣ್ಣ ಮಾತನಾಡಿ, ತಗಡೂರು ಪ್ರೌಢಶಾಲೆ ಅಭಿವೃದ್ಧಿಗೆ 5 ಲಕ್ಷ ರೂ ಅನುದಾನ ನೀಡುವುದಾಗಿ ಘೋಷಣೆ ಮಾಡಿದರು.

ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಎ.ಗೋಪಾಲಸ್ವಾಮಿ ಮಾತನಾಡಿ, ತಗಡೂರು ಸ್ಕೂಲ್ ಮತ್ತು ಗ್ರಾಮದ ಅಭಿವೃದ್ಧಿಗೆ ಸದಾ ಬದ್ಧನಾಗಿದ್ದೇನೆ ಎಂದು ಹೇಳಿದರು.

ಶಿಕ್ಷಣ ಇಲಾಖೆ ಉಪ ನಿರ್ದೇಶಕ ಬಲರಾಮ್ ಮಾತನಾಡಿ, ತಗಡೂರು ಶಾಲೆ ವಿಶೇಷವಾಗಿ ನನ್ನ ಗಮನ ಸೆಳೆದಿದೆ. ಇಲ್ಲಿರುವ ಸಮಸ್ಯೆಗೆ ಸ್ಪಂದಿಸುವುದಾಗಿ ತಿಳಿಸಿದರು.

ಶಿಕ್ಷಕರುಗಳಿಗೆ ಸನ್ಮಾನ:

ಶಿಕ್ಷಕರಾದ ಟಿ.ಎಸ್.ಶ್ರೀನಿವಾಸರಾವ್, ಪರಶುರಾಮ್, ಚಂದ್ರಶೇಖರ ಕೋರೆ, ಟಿ.ಡಿ.ತಿಮ್ಮಯ್ಯ, ಕೆ.ಶಿವಮೂರ್ತಿ, ಸಿ.ಎಚ್.ರವಿಕುಮಾರ್, ಸೋಮಶೇಖರ್, ವಿ.ರಂಗಸ್ವಾಮಿ, ಕೆ.ಟಿ.ಆನಂದ್, ಎಚ್. ಎಂ.ಕುಮಾರಸ್ವಾಮಿ, ಪಂಚಾಕ್ಷರಯ್ಯ, ನರಸಿಂಹ, ಶಿವೇಗೌಡ, ಕೆಂಪಯ್ಯ, ಕುಮಾರಸ್ವಾಮಿ, ನೇತ್ರಮ್ಮ, ನಂದೀಶಪ್ಪ, ಬಸವರಾಜ್, ಗಣೇಶಪ್ಪ, ಕೃಷ್ಣಪ್ಪ ಮತ್ತಿತರರನ್ನು ಸನ್ಮಾನಿಸಲಾಯಿತು.

ಇದೇ ಸಂದರ್ಭದಲ್ಲಿ ಶಾಲೆಗೆ ಭೂ ದಾನ ಮಾಡಿದ ಚನ್ನವೀರೇಗೌಡ ಮತ್ತು ರುದ್ರಪ್ಪ ಕುಟುಂಬದವರನ್ನು ಗೌರವಿಸಲಾಯಿತು. ತಾಲೂಕು ಗ್ಯಾರಂಟಿ ಯೋಜನಾ ಸಮಿತಿ ಅಧ್ಯಕ್ಷ ಎಲ್.ಪಿ.ಪ್ರಕಾಶ್ ಗೌಡ, ಕ್ಷೇತ್ರ ಶಿಕ್ಷಣಾಧಿಕಾರಿ ದೀಪ, ಗ್ರಾಪಂ ಅಧ್ಯಕ್ಷ ಹೇಮರಾಜ್, ಗ್ರಾ.ಪಂ.ಸದಸ್ಯ ಭಾರತೀಶ್, ಉದ್ಯಮಿ ಅಣತಿ ಯೋಗೇಶ್, ಓಬಳಾಪುರ ಬಸವರಾಜ್, ಉದ್ಯಮಿ ರಾಜೇಗೌಡ, ಮುಖ್ಯ ಶಿಕ್ಷಕಿ ಜಯಮ್ಮ, ನಿವೃತ್ತ ಉಪನ್ಯಾಸಕ ಪಂಡಿತ್ ವೀರಭದ್ರಪ್ಪ, ಟಿ.ಡಿ.ಸೋಮಶೇಖರ್, ಅಶೋಕ್, ಚೆನ್ನವೀರೇಗೌಡ, ಪ್ರವೀಣ್ ಕುಮಾರ್, ಗಿರೀಶ್, ರಂಗಸ್ವಾಮಿ ಮತ್ತಿತರರು ಇದ್ದರು.

# ಹಿರಿಯ ನಾಗರೀಕರ ಕ್ರೀಡಾಕೂಟ, ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಚಾಲನೆ

ಮಲ್ಲಮ್ಮ ನುಡಿ ವಾರ್ತೆ

ರಾಯಚೂರು ಸೆಪ್ಟೆಂಬರ್ 21-ವಿಶ್ವ ಹಿರಿಯ ನಾಗರಿಕರ ದಿನಾಚರಣೆ-2025 ನಿಮಿತ್ತ ಹಿರಿಯ ನಾಗರೀಕರಿಗೆ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಗರದ ಜಿಲ್ಲಾ ಮಹಾತ್ಮಗಾಂಧಿ ಕ್ರೀಡಾಂಗಣದಲ್ಲಿ ಸೆ.20ರಂದು ನಡೆದವು. ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹಾಗೂ ಹಿರಿಯ ನಾಗರೀಕರ ಕ್ಷೇತ್ರದಲ್ಲಿ ಶ್ರಮಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳು ರಾಯಚೂರು ಇವರ ಸಂಯುಕ್ತಾಶ್ರಯದಲ್ಲಿ ಕಾರ್ಯಕ್ರಮ ನಡೆಯಿತು. ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಅಧಿಕಾರಿಗಳು ಮತ್ತು ಇನ್ನಿತರರು ಇದ್ದರು.

# ರಾಷ್ಟ್ರೀಯ ಹೆದ್ದಾರಿ 748ಎಗೆ ಭೂಸ್ವಾಧೀನ ಘೋಷಣೆ: ಭೂಸರ್ವೆಗೆ ಸಹಕರಿಸಲು ಸಹಾಯಕ ಆಯುಕ್ತರ ಮನವಿ

ಮಲ್ಲಮ್ಮ ನುಡಿ ವಾರ್ತೆ

ರಾಯಚೂರು ಸೆಪ್ಟೆಂಬರ್ 21- ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ ಅವರ ಅಧಿಸೂಚನೆ ಸಂಖ್ಯೆ ಎಸ್‌ಓ 3715(ಇ) ದಿನಾಂಕ: 13.08.2025 ರಂದು ರಾಷ್ಟ್ರೀಯ ಹೆದ್ದಾರಿ ಕಾಯ್ದೆ 1956 ಕಲಂ 3(ಎ) ರಂತೆ ಎನ್‌ಹೆಚ್-748ಎ ಕ್ಕೆ ಸಂಬಂಧಿಸಿದಂತೆ 273.4 ಕಿ.ಮೀ ಯಿಂದ 321 ಕಿ.ಮೀ ರವರೆಗೆ ರಸ್ತೆಗೆ ಒಳಪಡುವ ದೇವದುರ್ಗ ತಾಲೂಕಿನ ತಿಪ್ಪಲದಿನ್ನಿ ಗ್ರಾಮ, ರಾಯಚೂರು ತಾಲೂಕಿನ ಕಾಟ್ಲಟ್ಕೂರು, ಮಂಡಲಗೇರಾ, ಸಿಂಗನೋಡಿ, ಪೋತ್ಗಲ್, ಅಸ್ಕಿಹಾಳ, ರಾಯಚೂರು, ವಡವಟ್ಟಿ, ಬಾಯಿದೊಡ್ಡಿ, ಮನ್ಸಲಾಪುರ, ಕಲ್ಮಲಾ, ಹುಣಸಿಹಾಳ ಹುಡಾ ಮತ್ತು ಯಕ್ಲಾಸಪುರ ಹಾಗೂ ಸಿರವಾರ ತಾಲೂಕಿನ ಸಿರವಾರ್, ಜಾಲಾಪುರ, ಅತ್ನೂರು ಮತ್ತು ಜಕ್ಕಲದಿನ್ನಿ ಗ್ರಾಮಗಳ ಜಮೀನುಗಳನ್ನ ಭೂಸ್ವಾಧೀನ ಪಡಿಸಿಕೊಳ್ಳಲು ಘೋಷಣೆಯಾಗಿದೆ. ಆದ್ದರಿಂದ ಈ ಅಧಿಸೂಚನೆಯಂತೆ ಭೂಸ್ವಾಧೀನ ಪ್ರಕ್ರಿಯೆಯನ್ನು ಆದ್ಯತೆ ಮೇರೆಗೆ ಪ್ರಾರಂಭಿಸಲು ಸರ್ಕಾರದಿಂದ ಸೂಚನೆಗಳಿರುವುದರಿಂದ ಮತ್ತು ಈ ಯೋಜನೆಯು ಕೇಂದ್ರ ಸರ್ಕಾರದ ಮಹತ್ವದ ಯೋಜನೆ ಆಗಿರುವುದರಿಂದ ದಿನಾಂಕ: 22.09.2025 ರಂದು ಜಮೀನುಗಳ ಜಂಟಿ ಮೇಜನ ಸರ್ವೆ (Joint Measurement Survey-JMS) ಕಾರ್ಯವನ್ನು ಸಿರವಾರ ತಾಲೂಕಿನಿಂದ ಪ್ರಾರಂಭಿಸಲಾಗುತ್ತದೆ. ಈ ಅಧಿಸೂಚನೆಯಲ್ಲಿ ನಮೂದಾದ ಸರ್ವೆ ನಂಬರಗಳ ಭೂ ಮಾಲೀಕರು, ಸಾರ್ವಜನಿಕರು, ಸ್ಥಳೀಯರು ಭೂ ಸರ್ವೆ ಮಾಡಲು ಆಗಮಿಸುವ ಅಧಿಕಾರಿ ಸಿಬ್ಬಂದಿಯೊಂದಿಗೆ ಸಹಕರಿಸಲು ಕೋರಲಾಗಿದೆ. ಮುಂದುವರೆದು, ಈ ಅಧಿಸೂಚನೆಯಲ್ಲಿ ನಮೂದಾದ ಸರ್ವೆ ನಂಬರ್‌ಗಳಲ್ಲಿ ಯಾವುದೇ ತರಹದ ವಹಿವಾಟು, ಮನೆ ಅಥವಾ ಕಟ್ಟಡಗಳನ್ನು ಕಟ್ಟುವುದು, ಗಿಡ-ಮರಗಳನ್ನು ಹಾಕುವುದು, ಭೂಮಿಯನ್ನು ಅಭಿವೃದ್ಧಿ ಪಡಿಸುವುದು, ಭೂಮಿಯನ್ನು ಬಿನ್ ಶೇತ್ಕಿಯನ್ನು ಮಾಡುವುದು, ಬೋರವೆಲ್ ಹಾಕುವುದನ್ನು ಇತರೆ ಯಾವುದೇ ಮಾಲ್ಕಿಗಳನ್ನು ಈ ಅಧಿಸೂಚನೆಯಾದ ದಿನಾಂಕದ ನಂತರ ಕೈಗೊಳ್ಳಬಾರದೆಂದು ರಾಯಚೂರ ಸಹಾಯಕ ಆಯುಕ್ತರ ಕಚೇರಿಯ ಪ್ರಕಟಣೆ ತಿಳಿಸಿದೆ.

# ರಡ್ಡಿ ಸಿರಿ ಬ್ಯಾಂಕ್ 73.54 ಲಕ್ಷ ಲಾಭ ವಿರುಪಾಕ್ಷಪ್ಪ ಮುರಾಳ



**ಮಲ್ಲಮ್ಮ ನುಡಿ ವಾರ್ತೆ**

ಇಳಕಲ್-ಇಲ್ಲಿನ ಎಸ್,ವಿ,ಎಮ್, ಕಾಲೇಜ್ ಕಾಂಪ್ಲೆಕ್ಸ್‌ನಲ್ಲಿರುವ ರಡ್ಡಿಸಿರಿ ಬ್ಯಾಂಕ್‌ನ ಏಳನೇಣಟಿಜಜಜಿಟಿಜಜಯ ವಾರ್ಷಿಕ ಸರ್ವ ಸಾಧಾರಣ ಸಭೆ ಜರಗಿತು ರಡ್ಡಿ ಸಿರಿ ಬ್ಯಾಂಕ್ ಪ್ರಾರಂಭವಾಗಿ ಏಳು ವರ್ಷದಲ್ಲಿ ಶೇರುದಾರರ ಸಹಕಾರ ಸಿಬ್ಬಂದಿಯವರ ಶ್ರಮದಿಂದ 73.54 ಲಕ್ಷ ರೂಪಾಯಿ ಲಾಭಗಳಿಸಿದ್ದು ಸಹಕಾರಿ ಸೌಹಾರ್ದ ಬ್ಯಾಂಕುಗಳ ಅಭಿವೃದ್ಧಿಗೆ ಶೇರುದಾರರ ಸಹಕಾರವೇ ಮುಖ್ಯಕಾರಣವಾಗಿರುತ್ತದೆ.ಆಡಳಿತ ಮಂಡಳಿಯವರ ಮೇಲೆ ವಿಶ್ವಾಸ ಇಟ್ಟು ಬ್ಯಾಂಕಿಗೆ ಬರುವ ಗ್ರಾಹಕರಿಗೆ ಉತ್ತಮ ಸೇವೆ ಒದಗಿಸಿದರೆ ಮಾತ್ರ ಬ್ಯಾಂಕುಗಳ ಅಭಿವೃದ್ಧಿ ಹೊಂದಲು ಸಾಧ್ಯ ಎಂದು ಆಡಳಿತಾಧಿಕಾರಿ ವಿರುಪಾಕ್ಷಪ್ಪ ಮುರಾಳ ಹೇಳಿದರು.

ಸರ್ವಸಾಧಾರಣ ಸಭೆಯಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀದೇವಿ. ಅಮರೇಶ,ಕರಡದಾಳ. ಉಪಾಧ್ಯಕ್ಷ ಮಲ್ಲಿಕಾರ್ಜುನ.ಬಿ.ಪಾಟೀಲ್ (ರಾಂಪೂರ)ಸದಸ್ಯರಾದ ರಾಜಶೇಖರ ಶಿವನಗೌಡ ಪಾಟೀಲ್.ದೇವರಡ್ಡೆಪ್ಪ ನರಸನಗೌಡ ಚಳಗೇರಿ. ಸಂಗಣ್ಣ ಶಂಕ್ರಪ್ಪ ಹವಾಲ್ದಾರ. ಬಸವರಾಜ ಸಂಗನಗೌಡ ಕರಬಸಪ್ಪನವರ. ಸಂಗನಗೌಡ ಮಹಾಂತಗೌಡ ಗೌಡರ. ಮಲ್ಲಪ್ಪ ಮಾಹಾಂತಪ್ಪ ಬಿಸರಡ್ಡಿ. ಶಶಿಧರ ಮಾಹಾಂತಪ್ಪ ಗೆಜ್ಜಲಗಟ್ಟಿ. ಗೋಪಾಲ್ ಗಿರಿಯಪ್ಪ,ಡಗೆ. ಗಂಗಾದೇವಿ ತಿಮ್ಮನಗೌಡ ಮಾಲಿಪಾಟೀಲ್. ಮುತ್ತಣ್ಣ ಚಂದಪ್ಪ ರಾಮದುರ್ಗ. ಅಮರೇಶ್ ಮಾಹಾಂತಪ್ಪ ಕರಡದಾಳ. ವೇದಿಕೆ ಮೇಲೆ ಇದ್ದರು

ನೂರಾರು ಜನತೆಯ ಶೇರುದಾರರು ಸರ್ವ ಸಾಧಾರಣ ಸಭೆಯಲ್ಲಿ ಭಾಗಿಯಾಗಿದ್ದರು. ಸಭೆಗೆ ಆಗಮಿಸಿದ ಸರ್ವ ಶೇರುದಾರರಿಗೂ ಆಲ್ಫೋಪಾರ ಮತ್ತು ಊಟದ ವ್ಯವಸ್ಥೆಯನ್ನು ಮಾಡಿದ್ದರು.

ಗೋಪಾಲ್ ಡಗೆ ಸ್ವಾಗತಿಸಿದರು ವಿಜಯ ಕರಬಸಪ್ಪನವರು ಕಾರ್ಯಕ್ರಮ ನಿರೂಪಿಸಿದರು.

# ಸಹಕಾರ ಕ್ಷೇತ್ರ ಪ್ರತಿಯೊಬ್ಬರ ಜೀವಾಳ-ಮನ್ನಿಕೇರಿ



**ಮಲ್ಲಮ್ಮ ನುಡಿ ವಾರ್ತೆ**

ಬಾಗಲಕೋಟೆ,ಸೆ.22-ಸಹಕಾರ ರಂಗ ವ್ಯಕ್ತಿಯ ಏಳಿಗೆಗೆ ಸಹಕಾರಿಯಾಗಿದ್ದು, ಅದು ಪ್ರತಿಯೊಬ್ಬರ ಜೀವಾಳವಾಗಿ ಬದುಕಿಗೆ ಹೊಸ ಚೈತನ್ಯ ನೀಡುವ ಕಲ್ಪವೃಕ್ಷವಾಗಿದೆ ಎಂದು ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎ.ಸಿ.ಮನ್ನಿಕೇರಿ ಹೇಳಿದರು.

ತಾಲೂಕಿನ ಶಿರೂರು ಪಟ್ಟಣದ ಚನ್ನವೀರೇಶ್ವರ ಶಿರೂರು ಶಿಕ್ಷಕರ ಪತ್ತು ಬೆಳೆಸುವ ಸಹಕಾರಿ ಸಂಘದ ವಾರ್ಷಿಕ ಸರ್ವಸಾಧಾರಣ ಸಭೆಯ ಸುವರ್ಣ ಸಂಭ್ರಮ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿ, 50 ವರ್ಷಗಳ ಹಿಂದೆ ತಮ್ಮ ಬದುಕಿಗೆ ಅಗತ್ಯ ಹಣಕಾಸಿನ ನೆರವಿನ ಕಲ್ಪನೆಯನ್ನು ಇಟ್ಟುಕೊಂಡು ಶಿಕ್ಷಕರು ಸಹಕಾರಿ ಸಂಘವನ್ನು ಹುಟ್ಟು ಹಾಕಿರುವುದು ಒಳ್ಳೆಯ ಬೆಳವಣಿಗೆ ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ಸಹಕಾರ ಸಂಘಗಳ ಅಪರ ನಿಬಂಧಕ ಎಚ್.ವೈ.ಗದ್ದನಕೇರಿ, ಶಿರೂರಿನ ಶಿಕ್ಷಕರ ಪತ್ತಿನ ಸಹಕಾರಿ ಸಂಘ ಉತ್ತಮ ರೀತಿಯಲ್ಲಿ ಕೆಲಸ ಮಾಡಿ ಶಿಕ್ಷಕರ ಅಶೋತ್ತರಗಳಿಗೆ ಸ್ಪಂದಿಸಿ 50 ವರ್ಷಗಳನ್ನು ಕಳೆದು ಮುನ್ನಡೆದಿರುವುದು ನಿಜಕ್ಕೂ ಹೆಮ್ಮೆಯ ಸಂಗತಿ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಸಂಘದ ಅಧ್ಯಕ್ಷ ಎಸ್.ಎಸ್.ಕೊಣ್ಣೂರ, ಸಂಘ ವರ್ಷದಿಂದ ವರ್ಷಕ್ಕೆ ಪ್ರಗತಿ ಕಾಣುತ್ತಲೇ ಸಾಗಿದ್ದು, ಈ ಬಾರಿ ಸದಸ್ಯರಿಗೆ ಪ್ರತಿಶತ 12 ರಷ್ಟು ಲಾಭಾಂಶ ಹಂಚಿಕೆ ಮಾಡುತ್ತಿದೆ ಎಂದರು. ಸಮಾರಂಭದಲ್ಲಿ ನಿವೃತ್ತರಾದ ಸಂಘದ ಸದಸ್ಯರನ್ನು ಸನ್ಮಾನಿಸಲಾಯಿತು.

ಶಿಕ್ಷಣಧಿಕಾರಿ ಎಚ್.ಜಿ.ಮಿರ್ಜಿ,ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಎಸ್.ಬಡದಾನಿ, ಕ್ಷೇತ್ರ ಸಂಪನ್ಮೂಲ ವ್ಯಕ್ತಿ ಕಮಲಾ ಕುಂಟೋಜಿ, ಮುಖ್ಯ ಗುರುಗಳಾದ ವೈ.ಎಲ್.ಅಪ್ಪನ್ನವರ ಹಾಗೂ ಬಿ.ಜಿ.ದೊಡ್ಡಮನಿ, ಸಂಘದ ಉಪಾಧ್ಯಕ್ಷೆ ಅನುಪಮಾ ನುಚ್ಚಿ, ನಿರ್ದೇಶಕರಾದ ಎಸ್.ಎನ್.ಬಾರ್ಕಿ, ಆರ್.ಆರ್.ಪಚ್ಚನ್ನವರ ಹಾಗೂ ಎಂ.ಎಸ್.ಕಲಗುಡಿ, ಸಂಜಯ ನಡುವಿನಮನಿ,ಬಿ.ಎನ್.ಗುಲಗಂಜಿ, ಎಚ್.ಬಿ.ನಾಯ್ಕಲ್, ವಿ.ಕೆ.ಬೂದಿಹಾಳ, ವೈ.ಜಿ.ಕುಲಕರ್ಣಿ, ಕೆ.ಸಿ.ಹೈದರಾಬಾದಮಠ, ಎಚ್.ಎನ್.ತಳವಾರ, ಬಿ.ವೈ.ಗೂಳನ್ನವರ, ನಿರ್ದೇಶಕರು ಇದ್ದರು.

# ವೃದ್ಧಾಶ್ರಮದಲ್ಲಿ ಸ್ವಚ್ಛತಾ ಅಭಿಯಾನ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಸೆ.22-ನಗರದ ವಿದ್ಯಾ ಪ್ರಸಾರಕ ಮಂಡಳದ ಎಸ್.ಆರ್.ನರಸಾಪೂರ ಕಲಾ ಹಾಗೂ ಎಂ.ಬಿ.ಶಿರೂರ ವಾಣಿಜ್ಯ ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ (ಎನ್‌ಎಸ್‌ಎಸ್) ಘಟಕ 1 ಮತ್ತು 2ರ ವತಿಯಿಂದ ಎನ್‌ಎಸ್‌ಎಸ್. ಸಂಸ್ಥಾಪನ ದಿನದ ಅಂಗವಾಗಿ 'ಸ್ವಚ್ಛತಾಹೀ ಸೇವಾ' ಕಾರ್ಯಕ್ರಮದಡಿಯಲ್ಲಿ ಸ್ವಯಂ ಸೇವಕರು ನೀರಲಕೇರಿ ಹತ್ತಿರದ ಮುನಿ ವೃದ್ಧಾಶ್ರಮದಲ್ಲಿ ಶ್ರಮದಾನ ಮಾಡುವುದರ ಮೂಲಕ ಆವರಣದ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛಗೊಳಿಸಿದರು. ಅಲ್ಲಿನ ವೃದ್ಧರಿಗೆ ಹಣ್ಣು-ಹಂಪಲು ವಿತರಿಸಿ ಅವರೊಂದಿಗೆ ಮಾತುಕತೆ ನಡೆಸಿ ಅವರಿಂದ ತಮ್ಮ ಸೇವಾ ಕಾರ್ಯಕ್ಕೆ ಮೆಚ್ಚುಗೆಯನ್ನು ಪಡೆದುಕೊಂಡರು. ಎನ್‌ಎಸ್‌ಎಸ್ ಅಧಿಕಾರಿಗಳಾದ ಎಸ್.ವಾಯ್. ಬೊಮ್ಮಣ್ಣವರ ಹಾಗೂ ಎಸ್.ಎಂ ಹಡಪದ, ಉಪನ್ಯಾಸಕರಾದ ಶ್ವೇತಾ ಕುಲಕರ್ಣಿ ಮತ್ತು ಗೀತಾ ಕಿಲಬನೂರ ಮಾರ್ಗದರ್ಶನ ನೀಡಿದರು. ಪ್ರಾಚಾರ್ಯ ಶ್ರೀನಿವಾಸ ನರಗುಂದ ಅಭಿಯಾನಕ್ಕೆ ಚಾಲನೆ

# ಶಿಕ್ಷಕರಿಗೂ ತಂತ್ರಜ್ಞಾನದ ತಿಳುವಳಿಕೆ ಅಗತ್ಯ-ಡಾ.ಶಿವಪ್ರಸಾದ

**ಮಲ್ಲಮ್ಮ ನುಡಿ ವಾರ್ತೆ**

ಬಾಗಲಕೋಟೆ,ಸೆ.22-ದೇಶದ ಅಭಿವೃದ್ಧಿಗೆ ಸ್ವಾವಲಂಬಿ ತಂತ್ರಜ್ಞಾನದ ಅವಶ್ಯಕತೆಯಿದೆ. ಶಿಕ್ಷಕರು ಮುಂದಿನ ಪೀಳಿಗೆಯನ್ನು ಗಮದಲ್ಲಿಟ್ಟುಕೊಂಡು ಮಕ್ಕಳಿಗೆ ಶಿಕ್ಷಣ ನೀಡುವ ಅವಶ್ಯಕತೆಯಿದೆ ಎಂದು ಧಾರವಾಡ ಐಐಟಿಯ ಡೀನ್ ಡಾ.ಶಿವಪ್ರಸಾದ ಹೇಳಿದರು.



ನಗರದ ಬಿವಿವಿ ಸಂಘದ ನೂತನ ಸಭಾಭವದಲ್ಲಿ ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘ ಹಮ್ಮಿಕೊಂಡಿದ್ದ ಬಿವಿವಿಎಸ್ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, ಮುಂದಿನ 20 ವರ್ಷಗಳಲ್ಲಿ ತಂತ್ರಜ್ಞಾನ ಕ್ಷೇತ್ರದಲ್ಲಿ ಬದಲಾವಣೆಗೊಳ್ಳುವ ಸಾಧ್ಯತೆಯಿದೆ. ಮಾನವ ಇಲ್ಲದೆ ರೋಬೋಟ್ ಮೂಲಕ ಕೆಲಸ ಮಾಡುವ ಇಂತಹ ಸನ್ನಿವೇಶದಲ್ಲಿ ನಾವುಗಳು ಯಾವ ರೀತಿ ಬದಲಾವಣೆಗೊಳ್ಳಬೇಕು, ತಂತ್ರಜ್ಞಾನದ ಉಪಯೋಗವನ್ನು ಹೇಗೆ ಬಳಸಿಕೊಳ್ಳಬೇಕು ಎಂಬುದನ್ನು ಶಿಕ್ಷಕರು ಅರಿಯಬೇಕಾಗಿದೆ ಎಂದರು.

ಹ್ಯುಮನ್ ಮೈಂಡ್‌ಸೆಟ್ ಕೋಚ್ ಮಹೇಶ ಮಾಶ್ಯಾಳ ಮಾತನಾಡಿ, ಶಿಕ್ಷಕರು ಹಾಗೂ ವಿದ್ಯಾರ್ಥಿಗಳ ಮಧ್ಯೆ ಗುರು-ಶಿಷ್ಯ ಸಂಬಂದ ಬೆಳೆದಾಗ ಉತ್ತಮ ಸಮಾಜ ನಿರ್ಮಾಣವಾಗುತ್ತದೆ ಎಂದರು.

ಇನ್ನೊರ್ವ ಅತಿಥಿ ಮೇಜರ್.ಸಿ.ಎಸ್. ಆನಂದ ಮಾತನಾಡಿ, ಬದುಕಿನಲ್ಲಿ ಜಿಜ್ಞಾಸೆ ಅವಶ್ಯವಾಗಿದೆ. ಶಿಕ್ಷಕನಿಗೆ ತನ್ನ ಕೆಲಸ ವೃತ್ತಿಯಲ್ಲ ಅದೊಂದು ತಪಸ್ಸು. ಆ ತಪಸ್ಸು ನಮ್ಮ ಬೆಳವಣಿಗೆಯನ್ನು ಹೆಚ್ಚಿಸುತ್ತದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಸಂಘದ ಕಾರ್ಯಾಧ್ಯಕ್ಷ ವೀರಣ್ಣ ಚರಂತಿಮಠ, ಪ್ರೊ.ಎನ್.ಜಿ.ಕರೂರ ಉತ್ತಮ ಶಿಕ್ಷಣ ತಜ್ಞರಾಗಿದ್ದು ಅವರು ಪ್ರಾರಂಭಿಸಿದ ಈ ಶಿಕ್ಷಕ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಕಳೆದು 12 ವರ್ಷಗಳಿಂದ ನಡೆದು ಬಂದಿದೆ. ಪ್ರಶಸ್ತಿ ಶಿಕ್ಷಕರಿಗೆ ನೀಡುವ ಗೌರವ ಎಂದು ಹೇಳಿದರು. ಸಂಘದ ಆಡಳಿತಾಧಿಕಾರಿ ವಿ.ಆರ್.ಶಿರೋಳ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂಘದ ಪ್ರಸಾರರಂಗದ ನಿರ್ದೇಶಕ ಪಿ.ಎನ್.ಶಿಂಪಿ ವಂದಿಸಿದರು.

ಗೌರವ ಕಾರ್ಯದರ್ಶಿ ಮಹೇಶ ಅಥಣಿ ವೇದಿಕೆಮೇಲೆ ಉಪಸ್ಥಿತರಿದ್ದರು.

2023-24 ನೇ ಸಾಲಿನ ಪ್ರೊ.ಎನ್.ಜಿ ಕರೂರ ಬಿವಿವಿಎಸ್ ಅತ್ಯುತ್ತಮ ಶಿಕ್ಷಕ ಪ್ರಶಸ್ತಿಯನ್ನು ಮುಧೋಳ ಆರ್.ಎಮ್.ಜಿ ಪ್ರೌಢಶಾಲೆಯ ಎಸ್.ವಿ.ಗುಳಬಾಳ, ಎಮ್.ಬಿ.ಎ ನಿರ್ದೇಶಕ ಡಾ.ಪ್ರಕಾಶ ವಡವಡಗಿ, ವೈದ್ಯಕೀಯ ಶಿಕ್ಷಣ ವಿಭಾಗದಲ್ಲಿ ಡಾ.ಕಾಶಿನಾಥ ಅರಬ್ಬಿ. ತಾಂತ್ರಿಕ ಶಿಕ್ಷಣ ವಿಭಾಗದಲ್ಲಿ ಡಾ.ಪಾಂಡುರಂಗ ಕುಲಕರ್ಣಿ ಅವರಿಗೆ ನೀಡಲಾಯಿತು.

2024-25 ನೇ ಸಾಲಿಗೆ ಶಿಕ್ಷಕಿ ಅಂಜುಮ್ ಎಮ್.ಸಿದ್ದಿಕ್, ಪದವಿ ಕಾಲೇಜು ಶಿಕ್ಷಣ ವಿಭಾಗದಲ್ಲಿ ಡಾ.ನಾಗರಾಜ ಬೇವಿನಹಳ್ಳಿ, ವೈದ್ಯಕಿಯ ಶಿಕ್ಷಣ ವಿಭಾಗದಲ್ಲಿ ಪ್ರಾಚಾರ್ಯ ಡಾ.ವಾಯ್.ಶ್ರೀನಿವಾಸ, ತಾಂತ್ರಿಕ ಶಿಕ್ಷಣ ವಿಭಾಗದಲ್ಲಿ ಡಾ.ಅನಿತಾ ಎಸ್ ಅವರಿಗೆ ಪ್ರಶಸ್ತಿ ನೀಡಲಾಯಿತು.

ಡಾ.ಗುರುಲಿಂಗ ಕಾಪಸೆ ಬಿವಿವಿಎಸ್ ಅತ್ಯುತ್ತಮ ಶಿಕ್ಷಕ ಪ್ರಶಸ್ತಿಗಳನ್ನು 2023-24 ನೇ ಸಾಲಿಗೆ ಪದವಿ ಶಿಕ್ಷಣ ಕಲಾ ವಿಭಾಗದಲ್ಲಿ ಪ್ರೊ.ಮಹಾಂತೇಶ ಕಟಗೇರಿ, 2024-25 ನೇ ಸಾಲಿಗೆ ಪ್ರೊ. ಮೋನಪ್ಪ ಬಡಿಗೇರ ಅವರುಗಳಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಇದೇ ಸಂದರ್ಭದಲ್ಲಿ ಸ್ಮೈಲ್ ಟೀಚರ ಆನ್‌ಲೈನ್ ಬೋಧನಾ ತರಬೇತಿಯಲ್ಲಿ ಭಾಗವಹಿಸಿದ ಶಿಕ್ಷಕರಿಗೆ ವಿಸ್ತಾರ ಜಿಂದಗಿ ಪ್ರಶಸ್ತಿ ಪತ್ರ ನೀಡಲಾಯಿತು. ಶಾಲಾ ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷ ಮಹಾಂತೇಶ ಶೆಟ್ಟರ, ವೈದ್ಯಕೀಯ ಕಾಲೇಜು ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷ ಅಶೋಕ ಸಜ್ಜನ, ಮಲ್ಲಿಕಾರ್ಜುನ ಸಾಸನೂರ, ಸಿದ್ದರಾಮ ಮನಹಳ್ಳಿ. ಡಾ.ವಿಜಯಕುಮಾರ ಕಟಗಿಹಳ್ಳಿಮಠ, ಬಿ.ಆರ್.ಬೋಳಿಶೆಟ್ಟಿ ಇದ್ದರು.

# ರಾಜಕಾರಣಿಗಳಿಗೂ ಸಾಹಿತ್ಯ ಅಭಿರುಚಿ ಇರಬೇಕು-ಪಾಟೀಲ



**ಮಲ್ಲಮ್ಮ ನುಡಿ ವಾರ್ತೆ**

ಬಾಗಲಕೋಟೆ,ಸೆ.22-ರಾಜಕಾರಣಿಗಳು ಸಾಹಿತ್ಯದ ಒಲವು ಬೆಳೆಸಿಕೊಂಡಲ್ಲಿ ಸಾಮಾಜಿಕ ಸುಧಾರಣೆಗೆ ಅದು ಸಹಕಾರಿ ಆಗಲಿದೆ ಎಂದು ಬೀಳಗಿ ಶಾಸಕ ಜೆ.ಟಿ.ಪಾಟೀಲ ಹೇಳಿದರು.

ನವನಗರದ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಹಮ್ಮಿಕೊಂಡಿದ್ದ ಲಿಂ.ಜಿ.ಪಿ.ನಂಜಯ್ಯನಮಠ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿ, ಹಿಂದಿನ ರಾಜಕಾರಣಿಗಳು ಸಮಯ ಇದ್ದಾಗ ಪುಸ್ತಕ ಓದಿ ಸಾಹಿತ್ಯದ ಒಲುವು ಬೆಳೆಸಿಕೊಳ್ಳುತ್ತಿದ್ದರು. ಹೀಗಾಗಿ ಅವರು ಮುತ್ಸದ್ದಿ ರಾಜಕಾರಣಿ ಆಗಿ ಸಮಾಜದಲ್ಲಿ ಬದಲಾವಣೆ ಬಗ್ಗೆ ಚಿಂತನೆ ಮಾಡುತ್ತಿದ್ದರು. ಅವರ ಆದರ್ಶಗಳನ್ನು ಬೆಳೆಸಿಕೊಳ್ಳಬೇಕಾಗಿದೆ ಎಂದರು. ವಿಜಯಪುರ ಜಿಲ್ಲೆಯ ಕಸಾಪ ಅಧ್ಯಕ್ಷ ಹಾಸಿಂಪೀರ ವಾಲೀಕಾರ ಮಾತನಾಡಿ, ಪ್ರತಿಯೊಬ್ಬ ರಾಜಕಾರಣಿಗಳು ಆದರ್ಶಗಳನ್ನು ಬೆಳೆಸಿಕೊಳ್ಳಬೇಕು. ಈ ನಿಟ್ಟಿನಲ್ಲಿ ಲಿಂ.ಜಿ.ಪಿ.ನಂಜಯ್ಯನಮಠ ಅವರು ಬೆಳೆದು ಬಂದ ದಾರಿ ಮಹತ್ವದಾಗಿದೆ ಎಂದು ತಿಳಿಸಿದರು.

ಕಾಂಗ್ರೆಸ್ ಪಕ್ಷದ ಜಿಲ್ಲಾಧ್ಯಕ್ಷ ಎಸ್.ಜಿ.ನಂಜಯ್ಯನಮಠ ಮಾತನಾಡಿ, ನಮ್ಮ ತಂದೆಯವರು ಹುನಗುಂದ ಶಾಸಕರಾಗಿ ಕೆಲಸ ಮಾಡಿದ್ದು, ರಾಜಕಾರಣದ ಮಧ್ಯೆಯೂ ಸಾಹಿತ್ಯದ ಅಭಿರುಚಿ ಹೊಂದಿದ್ದರು. ಲಂಕೇಶ ಅವರ ಪುಸ್ತಕ ಸೇರಿದಂತೆ ಕಥೆ ಕಾದಂಬರಿಗಳನ್ನು ಓದುತ್ತಿದ್ದರು. ಜನರಿಗೆ ಅನುಕೂಲಕರ ಕೆಲಸ ಮಾಡುವ ಬಗ್ಗೆ ಚಿಂತನೆ ನಡೆಸುತ್ತಿದ್ದರು ಎಂದರು.

ಚರಂತಿಮಠದ ಪ್ರಭು ಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ಶಾಸಕ ಎಚ್. ವೈ.ಮೇಟಿ ಮುಖ್ಯ ಅತಿಥಿಯಾಗಿದ್ದರು. ಕಸಾಪ ಜಿಲ್ಲಾ ಅಧ್ಯಕ್ಷ ಶಿವಾನಂದ ಶೆಲ್ಲಿಕೇರಿ ಅಧ್ಯಕ್ಷತೆ ವಹಿಸಿದ್ದರು. ಪ್ರಿಯಾ ಕಟ್ಟಿ ನಿರೂಪಿಸಿ ವಂದಿಸಿದರು.

# ವಿಶ್ವೇಶ್ವರಯ್ಯನವರು ಮಾದರಿ ಇಂಜನೀಯರ್-ಪಾಟೀಲ



**ಮಲ್ಲಮ್ಮ ನುಡಿ ವಾರ್ತೆ**

ಬಾಗಲಕೋಟೆ,ಸೆ.22-ಸರ್ ಎಂ.ವಿಶ್ವೇಶ್ವರಯ್ಯನವರು ಪ್ರತಿಯೊಬ್ಬ ಇಂಜನಿಯರ್‌ಗೆ ಮಾದರಿಯಾಗಿದ್ದಾರೆ ಎಂದು ಹಾವೇರಿಯ ಲೋಕೋಪಯೋಗಿ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತ ಎನ್.ಎನ್.ಪಾಟೀಲ ಹೇಳಿದ್ದಾರೆ.

ನವನಗರದ ಕನ್ನಡ ಸಾಹಿತ್ಯ ಪರಿಷತ್ತು ಭವನದಲ್ಲಿ ಹಮ್ಮಿಕೊಂಡಿದ್ದ ಸರ್ ಎಂ.ವಿಶ್ವೇಶ್ವರಯ್ಯನವರ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ವಿಶ್ವೇಶ್ವರಯ್ಯವನರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದ ಅವರು, ಇಂದಿನ ಕಾಲದಲ್ಲಿ ಇಂಜನಿಯರ್ ಕಾರ್ಯ ಮಹತ್ವಪಡೆದುಕೊಂಡಿ-ದೆ. ಮುಂದಾಲೋಚನೆಯಿಂದ ಯಾರಿಗೂ ಹಾನಿಯಾಗದಂತೆ ಕೆಲಸ ಮಾಡಬೇಕಾಗಿದೆ ಎಂದರು.

ದೇಶದ ಸಂಪತ್ತು ಉಳಿಸುವ ನಿಟ್ಟಿನಲ್ಲಿ ಹಾಗೂ ಗುಣಮಟ್ಟದ ಕೆಲಸ ಮಾಡುವುದರಿಂದ ಎಲ್ಲರಿಗೂ ಸ್ಪಂದನೆ ಮಾಡುವುದು ಅಗತ್ಯವಿದೆ ಎಂದು ಪಾಟೀಲ ಹೇಳಿದರು.

ಜಮಖಂಡಿಯ ಬಿ.ಬಿ.ಹೈಸ್ಕೂಲ್ ಉಪ ಪ್ರಾಚಾರ್ಯ ಮಹಾಂತೇಶ ನರಸನಗೌಡರ, ವಿಶ್ವೇಶ್ವರಯ್ಯನವರ ಬದುಕು ಹಾಗೂ ಅವರು ನಡೆದು ಬಂದ ದಾರಿಯ ಬಗ್ಗೆ ಉಪನ್ಯಾಸ ನೀಡಿದರು.

ಸಮಾರಂಭದ ಅಧ್ಯಕ್ಷತೆಯನ್ನು ಕಸಾಪ ಜಿಲ್ಲಾಧ್ಯಕ್ಷ ಶಿವಾನಂದ ಶೆಲ್ಲಿಕೇರಿ ವಹಿಸಿದ್ದರು. ಅಭಿಯಂತರಾದ ನಾಗಪ್ಪ ಹೆಬ್ಬಿ, ಬಸವರಾಜ ಮೆಳವಂಕಿ, ಚಂದ್ರಪ್ರಕಾಶ ಚೌಧರಿ, ಸಿದ್ದರಾಮ ನಾವಿ, ಸಂಗಮೇಶ ಬಿಂಜವಾಡಗಿ ಇದ್ದರು.

ಈ ಸಂಧರ್ಭದಲ್ಲಿ ಬೆಂಗಳೂರಿನ ಕರ್ನಾಟಕ ನೀರಾವರಿ ನಿಗಮದ ಪ್ರಧಾನ ಅಭಿಯಂತರ ಅಶೋಕ ವಾಸನದ ಸೇರಿದಂತೆ ಇತರ ಅಭಿಯಂತರರನ್ನು ಸನ್ಮಾನಿಸಲಾಯಿತು.

# ಬಿಜೆಪಿಯಿಂದ ನಮೋ ಮ್ಯಾರಥಾನ್ ಜಿಎಸ್ ಟಿ ಇಳಿಕೆ ಸಂಭ್ರಮಾಚರಣೆ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಸೆ.22-ಹಿಂದೂಸ್ತಾನದಲ್ಲಿ ನೆಲೆಸಿರುವವರೆಲ್ಲ ಜಾತಿ ಜನಗಣತಿಯ ಧರ್ಮದ ಕಾಲಂನಲ್ಲಿ ಹಿಂದೂ ಎಂದು ಬರೆಯಿಸಬೇಕು ಎಂದು ಮಾಜಿ ಶಾಸಕ ವೀರಣ್ಣ ಚರಂತಿಮಠ ಹೇಳಿದರು. ನಗರದ ಬಸವೇಶ್ವರ ವೃತ್ತದಲ್ಲಿ ಭಾರತೀಯ ಜನತಾ ಪಾರ್ಟಿ ಬಾಗಲಕೋಟೆ ಮತಕ್ಷೇತ್ರದ ಯುವ ಮೋರ್ಚಾದಿಂದ ಸೋಮವಾರ ಹಮ್ಮಿಕೊಂಡ ನಮೋ ಮ್ಯಾರಥಾನ್ ಹಾಗೂ ಜಿ.ಎಸ್.ಟಿ ಇಳಿಕೆ ಸಂಭ್ರಮಾಚಾರಣೆಯಲ್ಲಿ ಮಾತನಾಡಿದ ಅವರು,




ದೇಶದ ನಾಗರಿಕರ ಹಿತವನ್ನು ಬಯಸುವ ಪ್ರಧಾನಿ ನರೇಂದ್ರ ಮೋದಿ ತೆರಿಗೆ ಪ್ರಮಾಣ ಕಡಿಮೆಗೊಳಿಸುವ ಮೂಲಕ ಬಡವರು, ಮಧ್ಯಮ ವರ್ಗದವರಿಗೆ ಆಗುವ ತೆರಿಗೆ ಹೊರೆಯನ್ನು ಇಳಿಸಿ ನವರಾತ್ರಿಗೆ ವಿಶೇಷ ಕೊಡುಗೆ ನೀಡಿದ್ದಾರೆ ಎಂದು ಹೇಳಿದರು. ರಾಜ್ಯದಲ್ಲಿ ಸಿದ್ರಾಮಯ್ಯನವರ ಸರಕಾರ ನಡೆಸುತ್ತಿರುವ ಜಾತಿ ಗಣತಿ ಎಲ್ಲ ಧರ್ಮ ಜಾತಿಗಳಲ್ಲಿ ಒಡಕು ತಂದು ಸಮಾಜ ಒಡೆಯುವ ಕೆಲಸವಾಗಿದೆ. ದೇವರಾಜ ಅರಸುಗಿಂತಲೂ ಒಂದು ಹೆಜ್ಜೆ ಮುಂದೆ ಹೋಗಬೇಕು ಎಂಬ ಆಶಯನ್ನಿಟ್ಟುಕೊಂಡು ರಾಜ್ಯದಲ್ಲಿ ಧರ್ಮ ಜಾತಿ ಒಡೆಯುವ ಕೆಲಸವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಮಾಡುತ್ತಿದ್ದಾರೆ ಎಂದ ಚರಂತಿಮಠ, ಕೇಂದ್ರದಿಂದ ಜನವರಿಯಿಂದ ಪ್ರಾರಂಭವಾಗುವ ಜನಗಣತಿ ಅಧಿಕೃತವಾಗಿದ್ದು ಅದರಲ್ಲಿ ಎಲ್ಲರೂ ಕಡ್ಡಾಯವಾಗಿ ಧರ್ಮದ ಕಾಲಂನಲ್ಲಿ ಹಿಂದೂ, ಜಾತಿ ಕಾಲಂನಲ್ಲಿ ನಮ್ಮ ನಮ್ಮ ಜಾತಿ ಉಪಜಾತಿ ಬರೆಯಿಸುವಂತೆ ಹೇಳಿದರು. 100 ನೇ ವರ್ಷದ ಸಂಭ್ರಮಾಚರಣೆಯಲ್ಲಿರುವ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಪಥಸಂಚಲನ ಅಕ್ಟೋಬರ 5ರಂದು ಬಾಗಲಕೋಟೆಯಲ್ಲಿ ಜರುಗಲಿದ್ದು ಎಲ್ಲರೂ ಅದರಲ್ಲಿ ಸಕ್ರಿಯವಾಗಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದರು. ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ಮಾತನಾಡಿ, ಜಿ.ಎಸ್.ಟಿ ಇಳಿಕೆಯಿಂದ ದೇಶದ ಸಾಮಾನ್ಯ ಜನರಿಗೂ ಅನುಕೂಲವಾಗಲಿದೆ ಎಂದರು.

ಬಿಜೆಪಿ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ ಮಾತನಾಡಿ, ಸಪ್ಟೆಂಬರ್ 22 ರಿಂದ ಅಕ್ಟೋಬರ್ 2 ಗಾಂಧಿಜಿ ಜಯಂತಿವರೆಗೂ ಪ್ರಧಾನಿ ನರೇಂದ್ರ ಮೋದಿಯವರ ಹುಟ್ಟು ಹಬ್ಬವನ್ನು ವಿವಿಧ ಸಾರ್ಥಕ ಕಾರ್ಯಕ್ರಮಗಳ ಮೂಲಕ ಆಚರಣೆ ಮಾಡಲಾಗುತ್ತಿದೆ ಎಂದು ಹೇಳಿದರು. ಬೀಳೂರ ಅಜ್ಜನ ಗುಡಿಯಿಂದ ಬಸವೇಶ್ವರ ವೃತ್ತದವರೆಗೂ ನಡೆದ ನಮೋ ಮ್ಯಾರಥಾನ ನಡಿಗೆ ಎಲ್ಲರ ಗಮನಸೆಳೆಯಿತು. ಜಿ.ಎನ್.ಪಾಟೀಲ, ಲಕ್ಷ್ಮೀನಾರಾಯಣ ಕಾಸಟ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಜು ನಾಯ್ಕರ, ರಾಜು ರೇವಣಕರ್, ವೈದ್ಯಕೀಯ ಪ್ರಕೋಷ್ಠದ ಸಂಚಾಲಕ ರವಿ ಕೋಟೆನ್ನವರ, ನಗರಸಭೆ ಅಧ್ಯಕ್ಷೆ ಸವಿತಾ ಲೆಂಕೆನ್ನವರ, ಉಪಾಧ್ಯಕ್ಷೆ ಶೋಭಾ ರಾವ, ಸದಸ್ಯರಾದ ರೇಖಾ ಕಲಬುರಗಿ, ಶಶಿಕಲಾ ಮಜ್ಜಗಿ, ಪ್ರೇಮಾ ಅಂಬಿಗೇರ, ಸರಸ್ವತಿ ಕುರಬರ, ಶಿವಲೀಲಾ ಪಟ್ಟಣಶೆಟ್ಟಿ, ನಗರ ಮಂಡಲ ಅಧ್ಯಕ್ಷ ಬವರಾಜ ಹುನಗುಂದ, ಗ್ರಾಮೀಣ ಮಂಡಲ ಅಧ್ಯಕ್ಷ ಸುರೇಶ ಕೊಣ್ಣೂರ,ಉಮೇಶ ಹಂಚಿನಾಳ,ಶ್ರೀಧರ ನಾಗರಬೆಟ್ಟ, ಸಂಗಯ್ಯ ಸರಗಣಾಚಾರಿ. ಸುರೇಶ ಮಜ್ಜಗಿ, ರಾಜು ಗಾಣಿಗೇರ ಸೇರಿದಂತೆ ಅನೇಕ ಜನ ಕಾರ್ಯಕರ್ತರು ಭಾಗವಹಿಸಿದ್ದರು.



ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲೂಕಿನ ತಿಮ್ಮಾಪುರ ಗ್ರಾಮದಲ್ಲಿ ಸೋಮವಾರ ಮಾರುತೇಶ್ವರ ಹಾಗೂ ಬಸವೇಶ್ವರ ರಥೋತ್ಸವ ವಿಜೃಂಭಣೆಯಿಂದ ಜರುಗಿತು. ಈ ಸಂದರ್ಭದಲ್ಲಿ ಭಕ್ತಾದಿಗಳು ದೇವರ ದರ್ಶನ ಪಡೆದು ಪುನಿತರಾದರು.
(ಮಲ್ಲಮ್ಮ ನುಡಿ ಚಿತ್ರ)

# ಸಾಮಾಜಿಕ-ಶೈಕ್ಷಣಿಕ ಸಮೀಕ್ಷೆಗೆ ಶಾಸಕ ಎಚ್ .ವೈ.ಮೇಟಿ ಚಾಲನೆ.

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಸೆ.22-ಜಿಲ್ಲೆಯಾದ್ಯಂತ ಸೋಮವಾರದಿಂದ ಆರಂಭವಾದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ ಬಾಗಲಕೋಟೆ ಶಾಸಕ ಎಚ್.ವಾಯ್.ಮೇಟಿ ಚಾಲನೆ ನೀಡಿದರು. ಗಣತಿದಾರರಿಗೆ ಸಮೀಕ್ಷಾ ಕಿಟ್‌ಗಳನ್ನು ವಿತರಿಸಿ, ನಂತರ ನವನಗರದ ಸೆಕ್ಟರ ನಂಬರ 20ರ ವ್ಯಾಪ್ತಿಯಲ್ಲಿ ಬರುವ ಮನೆಗಳಿಗೆ ಭೇಟಿ ನೀಡಿ ಸಮೀಕ್ಷೆಗೆ ಚಾಲನೆ ನೀಡಿ ಮಾತನಾಡಿದ ಅವರು, ರಾಜ್ಯದ ಅಭಿವೃದ್ಧಿ ಮತ್ತು ಸಮಾಜದ ಎಲ್ಲ ವರ್ಗಗಳಿಗೆ



ಸಮಾನ ಅವಕಾಶ ಒದಗಿಸುವ ನಿಟ್ಟಿನಲ್ಲಿ ಹಿಂದುಳಿದ ವರ್ಗಗಳ ಆಯೋಗದಿಂದ ಸಮೀಕ್ಷೆ ಕಾರ್ಯವನ್ನು ನಡೆಸಲಾಗುತ್ತಿದೆ. ಸಮೀಕ್ಷೆ ಒಟ್ಟು 60 ಪ್ರಶ್ನೆಗಳನ್ನೊಳಗೊಂಡಿದ್ದು ಗಣತಿದಾರರಿಗೆ ಸಹಕಾರ ನೀಡುವಂತೆ ಸಾರ್ವಜನಿಕರಲ್ಲಿ ಕೋರಿದರು. ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಸಂಗಪ್ಪ, ಜಿ.ಪಂ ಸಿಇಓ ಶಶಿಧರ ಕುರೇರ, ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಪಂಕಜ, ಬಾಗಲಕೋಟೆ ತಹಶೀಲ್ದಾರ ವಾಸುದೇವ ಸ್ವಾಮಿ, ಗ್ರೇಡ್-2 ತಹಶೀಲ್ದಾರ ಬಿರಾದಾರ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ತಾಲೂಕಾ ಅಧಿಕಾರಿ ಸುರೇಶ ಪತ್ತಾರ, ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಎಸ್.ಬಡದಾನಿ, ಗಣತಿ-ದಾರರಾದ ಎಂ.ಆರ್.ಸುತಾರ, ರಾಘವೇಂದ್ರ ಕುರಿ, ಐ.ಡಿ.ಅತ್ತಾರ, ಎ.ಎಂ.ಮೋಮಿನ್, ಮನಿಯಾರ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಬಾಗಲಕೋಟೆ ತಾಲೂಕಾ ವ್ಯಾಪ್ತಿಯಲ್ಲಿ 86670 ಮನೆಗಳಿಗೆ ಭೇಟಿ ನೀಡಿ ಸಮೀಕ್ಷೆ ಕೈಗೊಳ್ಳಲಾಗುತ್ತಿದೆ. ಈ ಸಮೀಕ್ಷೆ ಕಾರ್ಯಕ್ಕಾಗಿ 771 ಸಮೀಕ್ಷಾ ಬ್ಲಾಕ್‌ಗಳನ್ನು ಗುರುತಿಸಿ, ಪ್ರತಿ ಬ್ಲಾಕ್‌ಗೆ ಒಬ್ಬರಂತೆ ಸಮೀಕ್ಷಾದಾರರನ್ನು ನೇಮಿಸಲಾಗಿದೆ. ಸಮೀಕ್ಷಾ ಕಾರ್ಯವು ಸಂಪೂರ್ಣವಾಗಿ ಮೊಬೈಲ್ ಸರ್ವೆ ಆ್ಯಪ್ ಮುಖಾಂತರ ನಡೆಯಲಿದೆ. ಸಮೀಕ್ಷೆಗೆ ಸಂಬಂಧಿಸಿದಂತೆ ಯಾವುದೇ ಮಾಹಿತಿಯ ಗೊಂದಲವಿದ್ದಲ್ಲಿ ಕರ್ನಾಟಕ ಹಿಂದುಳಿದ ವರ್ಗಗಳ ಆಯೋಗದ ಸಹಾಯವಾಣಿ ಸಂಖ್ಯೆ 8050770004 ಗೆ ಕರೆ ಮಾಡಿ ಸಹಾಯ ಪಡೆಯಬಹುದಾಗಿದೆ.

